ಸಂಪುಟ 01 | ಸಂಚಿಕೆ 131 | ಶುಕ್ರವಾರ 17 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಅಂತರರಾಷ್ಟ್ರೀಯ ನ್ಯಾಯ ದಿನ (World Day for International Justice)

ಈ ದಿನವನ್ನು ಅಂತರರಾಷ್ಟ್ರೀಯ ನ್ಯಾಯ ವ್ಯವಸ್ಥೆಯ ಮಹತ್ವ, ಯುದ್ಧ ಅಪರಾಧಗಳು, ಮಾನವ ಹಕ್ಕುಗಳ ಉಲ್ಲಂಘನೆ ಹಾಗೂ ನರಮೇಧದಂತಹ ಗಂಭೀರ ಅಪರಾಧಗಳಿಗೆ ನ್ಯಾಯ ದೊರಕಿಸುವ ಉದ್ದೇಶದಿಂದ ಆಚರಿಸಲಾಗುತ್ತದೆ. 1998ರ ಜುಲೈ 17ರಂದು ರೋಮ್ ಒಪ್ಪಂದ (ಖಿಂಟಜ ಖಣಚಿಣ-ಣಣಜ) ಅಂಗೀಕರಿಸಲ್ಪಟ್ಟ ಹಿನ್ನೆಲೆಯಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ.

2) ವಿಶ್ವ ಇಮೋಜಿ ದಿನ (World Emoji Day)

ಡಿಜಿಟಲ್ ಸಂವಹನದಲ್ಲಿ ಇಮೋಜಿಗಳ ಪಾತ್ರವನ್ನು ಸಂಭ್ರಮಿಸುವ ದಿನ. ಸಾಮಾಜಿಕ ಜಾಲತಾಣಗಳು, ಮೆಸೇ-ಜಿಂಗ್ ಆ್ಯಪ್‌ಗಳು ಮತ್ತು ಆನ್‌ಲೈನ್ ಸಂವಹನದಲ್ಲಿ ಇಮೋಜಿಗಳು ಭಾವನೆಗಳನ್ನು ವ್ಯಕ್ತಪಡಿಸಲು ಪ್ರಮುಖ ಸಾಧನವಾಗಿವೆ.

## ಸುಭಾಷಿತ

ಜೀವನದ ಸಂಪತ್ತು ಅದರ ಅನುಭವಗಳಲ್ಲಿದೆ. ನೆನಪು ಆ ಅನುಭವಗಳ ನಿಧಿ

-ಕುವೆಂಪು

## 62 ಸಾವಿರ ಕೋಟಿ ರೂ. ಮೌಲ್ಯದ ಯೋಜನೆಗೆ ಕೇಂದ್ರ ಅಸ್ತು

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ: ಕೇಂದ್ರ ಸಚಿವ ಸಂಪುಟವು 62,500 ಕೋಟಿ ರೂ. ಮೌಲ್ಯದ ಹೊಸ ಮೊಬೈಲ್ ಉತ್ಪಾದನಾ ಯೋಜನೆಗೆ ಅನುಮೋದನೆ ನೀಡಿದೆ.ಇದು ಈಗಾಗಲೇ ಯಶಸ್ವಿಯಾಗಿರುವ ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟಿವ್ (ಉತ್ಪಾದನೆ ಸಂಬಂಧಿತ ಪ್ರೋತ್ಸಾಹ ಧನ) ಯೋಜನೆಯ ಮುಂದುವರಿದ ಭಾಗವಾಗಿದ್ದು, ಮುಂದಿನ 5 ವರ್ಷಗಳ ಕಾಲ ಜಾರಿಯಲ್ಲಿರಲಿದೆ.

ಈ ಹಿಂದೆ ಜಾರಿಯಲ್ಲಿದ್ದ ಯೋಜನೆಯಿಂದ ಆ?ಯಪಲ್ ಸೇರಿದಂತೆ ಹಲವು ಜಾಗತಿಕ ಕಂಪನಿಗಳು ಭಾರತದಲ್ಲೇ ಮೊಬೈಲ್ ಉತ್ಪಾದನೆ ಆರಂಭಿಸಿದ್ದವು. ಅದರ ಪರಿಣಾಮವಾಗಿ ಸ್ಮಾರ್ಟ್‌ಫೋನ್‌ಗಳು ಭಾರತದ ಪ್ರಮುಖ ರಫ್ತು ಉತ್ಪನ್ನಗಳಲ್ಲೊಂದು ಎಂಬ ಹೆಗ್ಗಳಿಕೆಯನ್ನೂ ಪಡೆದುಕೊಂಡಿದೆ. ಇದ-ರಿಂದ ಭಾರತದಲ್ಲಿ ಮೊಬೈಲ್ ಉತ್ಪಾದನೆಯ ಸ್ಥಳೀಯ ಮೌಲ್ಯವರ್ಧನೆ 24% ಏರಿಕೆಯಾಗಿದೆ.

ಈ ಹೊಸ ಯೋಜನೆಯಲ್ಲಿ ಸ್ಥಳೀಯವಾಗಿ ಬಿಡಿಭಾಗಗಳ ಖರೀದಿ, ಭಾರತೀಯ ಬ್ರ್ಯಾಂಡ್‌ಗಳ ವಿನ್ಯಾಸ ಮತ್ತು ಸಂಶೋಧನೆ ಹಾಗೂ ಮೊಬೈಲ್ ರಫ್ತುಗೆ ವಿಶೇಷ ಪ್ರೋತ್ಸಾಹ ನೀಡಲಾಗಿದೆ ಎಂದು ಕೇಂದ್ರ ಐಟಿ



ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ. ಹೆಚ್ಚುವರಿ ಸಹಾಯಧನಯೋಜನೆಯಡಿ ಭಾರತದಲ್ಲೇ ತಯಾರಾಗುವ ಮೊಬೈಲ್‌ಗಳ ಮಾರಾಟದ ಮೇಲೆ 2.25% ನಿಂದ 5% ವರೆಗೆ ಪ್ರೋತ್ಸಾಹಧನ ನೀಡಲಾಗುತ್ತದೆ. ಇದಲ್ಲದೆ, ಪ್ರಮುಖ ಅಥ-'ವಾ ಬಿಡಿಭಾಗಗಳನ್ನ ದೇಶೀಯವಾಗಿ ಖರೀದಿಸಿದ್ರೆ ಹೆಚ್ಚುವರಿಯಾಗಿ 1.5% ವರೆಗೆ ಪ್ರೋತ್ಸಾಹಧನವನ್ನೂ ಒದಗಿಸಲಾಗುತ್ತದೆ.

ಭಾರತೀಯ ಬ್ರ್ಯಾಂಡ್‌ಗಳು ಸ್ವಂತ ವಿನ್ಯಾಸ ಮತ್ತು ಸಂಶೋಧನೆಗೆ ಉತ್ತೇಜನ ನೀಡುವುದರಿಂದ 3% ಹೆಚ್ಚುವರಿ ಪ್ರೋತ್ಸಾಹಧನ ಕೂಡ ನೀಡಲಾಗುತ್ತದೆ.39 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಉತ್ಪಾದನೆ ಗುರಿಈ ಯೋಜನೆಯ ಮೂಲಕ 5 ವರ್ಷಗಳಲ್ಲಿ 39 ಲಕ್ಷ ಕೋಟಿ ಮೌಲ್ಯದ ಮೊಬೈಲ್ ಉತ್ಪಾದನೆ ಸಾಧಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಹಿಂದಿನ ಯೋಜನೆಯಡಿ 22 ಲಕ್ಷ ಕೋಟಿ ಮೌಲ್ಯದ ಉತ್ಪಾದನೆ ದಾಖಲಾಗಿತ್ತು.

ಇದೇ ಅವಧಿಯಲ್ಲಿ 60 ಸಾವಿರ ನೇರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ. ಹಿಂದಿನ ಯೋಜನೆಯಿಂದ ಸುಮಾರು 2 ಲಕ್ಷ ಉದ್ಯೋಗಗಳು ನಿರ್ಮಾಣವಾಗಿದ್ದವು. ಕೇಂದ್ರ ಸರ್ಕಾರದ ಮಾಹಿತಿ ಪ್ರಕಾರ, ಹಿಂದೆ (ಉತ್ಪಾದನೆ ಸಂಬಂಧಿತ ಪ್ರೋತ್ಸಾಹಧನ) ಯೋಜನೆಯಡಿ 19 ಸಾವಿರ ಕೋಟಿ ರೂ. ಗಳಿಗೂ ಹೆಚ್ಚು ಪ್ರೋತ್ಸಾಹಧನ ವಿತರಿಸಲಾಗಿತ್ತು. ಅದರಿಂದ ಸರ್ಕಾರಕ್ಕೆ 25 ಸಾವಿರ ಕೋಟಿ ರೂ. ನೇರ ತೆರಿಗೆ ಹಾಗೂ ಸುಮಾರು 3 ಲಕ್ಷ ಕೋಟಿ ರೂ. ಆದಾಯ ಲಭಿಸಿದೆ. ಸದ್ಯ ಯೋಜನೆಯಡಿ 20 ಸಾವಿರ ಕೋಟಿ ರೂ.ಗಳಿಗೂ ಅಧಿಕ ಹೂಡಿಕೆ ಹರಿದುಬಂದಿದ್ದು, ಆರಂಭಿಕ ಗು-ರಿಗಿಂತ 3 ಪಟ್ಟು ಹೆಚ್ಚು ಸಾಧನೆ ಕಂಡಿದೆ.

ಸ್ಮಾರ್ಟ್‌ಫೋನ್ ಉತ್ಪಾದನೆ 11.61 ಲಕ್ಷ ಕೋಟಿ ರೂ.ಗಳಿಗೆ ತಲುಪಿದ್ದು, ನಿಗದಿಪಡಿಸಿದ್ದ ಗುರಿಗಿಂತ 142% ಹೆಚ್ಚು ಸಾಧನೆಯಾಗಿದೆ. ಇಂಡಿಯನ್ ಸೆಲ್ಯುಲರ್ ಅಂಡ್ ಎಲೆಕ್ಟ್ರಾನಿಕ್?ಸ ಅಸೋಸಿಯೇಷನ್ ಅಧ್ಯಕ್ಷ ಪಂಕಜ್ ಮಹೀಂದ್ರೂ ಅವರ ಪ್ರಕಾರ, ಭಾರತದ ಜಾಗತಿಕ ಮೊಬೈಲ್ ಉತ್ಪಾದನೆಯ ಪಾಲನ್ನು 35 ರಿಂದ 40%ಗೆ ಹೆಚ್ಚಿಸುವ ಗುರಿ ಹೊಂದಿದೆ.

## "ಬಲಗೈ ಜಾತಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಅಹ್ವಾನ"

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: 2025-26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ.70 ಮತ್ತು ಅದಕ್ಕಿಂತ ಹೆಚ್ಚು ಅಂಕ ಪಡೆದ ಬಲಗೈ ಜಾತಿಗಳ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಆಗಸ್ಟ್ 23ರಂದು ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಬಲಗೈ ಜಾತಿಗಳ ಒಕ್ಕೂಟದ ಜಿಲ್ಲಾ ಘಟಕದ ಅಧ್ಯಕ್ಷ ಭೀಮಣ್ಣ ಮಂಚಾಲ ತಿಳಿಸಿದರು.




ಅರ್ಹ ವಿದ್ಯಾರ್ಥಿಗಳು ಆ.16ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಣಿಗಾಗಿ 9148619419, 9448818117, 9742028212 2 9741993886 ಈ ಮೊಬೈಲ್ ನಂಬರಗಳಿಗೆ ಸಂಪರ್ಕಿಸಲು ತಿಳಿಸಿದ್ದಾರೆ.

## ಜಂಗಮರಹಟ್ಟಿಯಲ್ಲಿ ಮಳೆಗಾಗಿ ವಾಡಿಕೆಯಂತೆ ಕೊಪ್ಪೆಗಳ ಮದುವೆ ಮಾಡಿಸಿದ ಮಹಿಳೆಯರು

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಜವಳಗೇರಾ ಗ್ರಾಮ ಪಂಚಾಯತಿ ವ್ಯಾಪ್ತಿಯ ಜಂಗಮರಹಟ್ಟಿ ಗ್ರಾಮದ ಮಹಿಳೆಯರು ಮಳೆರಾಯ ಕೃಪೆತೋರಲೆಂದು ಕಪ್ಪೆಗಳಿಗೆ ಮದುವೆ ಮಾಡಿಸಿ ಕಪ್ಪೆಗಳನ್ನು ಕೊಡದಲ್ಲಿ ಹಾಕಿಕೊಂಡು ಮೇಲೆ ಬೇವಿನ ತಪ್ಪಲು, ಊದಿನ ಕಡ್ಡಿ ಇಟ್ಟು ಪೂಜೆ ಮಾಡಿ ಮನೆ ಮನೆಗೆ ತೆರಳಿ ಮಳೆರಾಯನಗೋಸ್ಕರ ಹಾಡನ್ನು ಹಾಡುತ್ತಾ, ಮೈ ಮೇಲೆ ನೀರನ್ನು ಹಾಕಿಸಿಕೊಂಡು ವೃತ ಮಾಡಿದ್ದು ವಿಶೇಷವಾಗಿತ್ತು.

ಗ್ರಾಮದ ಪ್ರತಿಯೊಂದು ಮನೆ ಮನೆಗೆ ತೆರಳಿ ರೈತರು ನೀಡಿದ ಧಾನ್ಯಗಳನ್ನು ನೀಡಿಸಿಕೊಂಡು ಮಹಿಳೆಯರು ಮಳೆಯ ಜಾನಪದಗಳನ್ನು ಹಾಡುತ್ತಾ ಮೈಮೇಲೆ ನೀರು ಹಾಕಿಸಿಕೊಂಡು ಧಾನ್ಯಗಳನ್ನು ಕೇಳುತ್ತಾ, ಜಮೀನಿನಲ್ಲಿ ಬಿತ್ತಿದ ಬೆಳೆಗಳು ಎಲ್ಲಾ ನಾಶವಾಗಿವೆ ಗ್ರಾಮ ಪಂಚಾಯಿತಿಯಿಂದ



ನಡೆಯುತ್ತಿರುವ ಉದ್ಯೋಗ ಖಾತ್ರಿ ರದ್ದಾಗಿವೆ. ಬಳಕೆ ನೀರು ಮತ್ತು ಕುಡಿಯುವ ನೀರು ಸರಿಯಾಗಿ ಊರಲ್ಲಿ ಬರುತ್ತಿಲ್ಲ ಹೀಗಾಗಿ ಬಳಕೆಗೆ ಮತ್ತು ಜಾನುವಾರಗಳಿಗೆ ನೀರು ಸಿಗುತ್ತಿಲ್ಲ ಭತ್ತ ನಾಟಿ ಮಾಡಬೇಕು ಎಂದರು.

ಈಗಾಗಲೇ ಒಂದು ತಿಂಗಳ ಹಿಂದೆಯೇ ಸಸಿ ಮಡಿ ಹಾಕಲಾಗಿದೆ. ಇದುವರೆಗೂ ಜಲಾಶಯದಿಂದ ನೀರು ಬರದ ಕಾರಣ ಈ ವರ್ಷ ನಾಟಿ ಕಾರ್ಯ ಕೂಡ ನಡೆದಿಲ್ಲ. ಕೂಲಿ ಕೆಲಸ ಇಲ್ಲದೆ ಗ್ರಾಮೀಣ ಭಾಗದ ಜನರ ಜೀವನ ತುಂಬ ಗಂಭೀರ ಪರಿಸ್ಥಿತಿಯಾಗಿದೆ. ಇನ್ನೂ ಮಳೆ ಬಾರದೆ ಇದ್ದರೆ ಮಾನವ ಸಂಕುಲ ನಾಶವಾಗುತ್ತವೆ. ರಾಜ್ಯದಲ್ಲಿ ಆದಷ್ಟು ಬೇಗನೆ ಮಳೆರಾಯ ಕೃಪೆ ತೋರಬೇಕಾಗಿದೆ. ಅದಕ್ಕಾಗಿ ಕೊಪ್ಪೆಗಳ ಮದುವೆ ಮಾಡಿದರೆ ಮಳೆ ಬರುತ್ತದೆ ಎಂಬ ವಾಡಿಕೆ ಹಿಂದಿನ ಕಾಲದಿಂದಲೂ ನಡೆಯುತ್ತಾ ಬಂದಿದೆ. ಅದಕ್ಕಾಗಿ ಈ ಕೊಪ್ಪೆಗಳ ಮದುವೆ ಮಾಡುವ ಮೂಲಕ ಮಳೆರಾಯನ ಮೊರೆ ಹೋಗಿದ್ದೇವೆ ಎಂದು ಗ್ರಾಮದ ಮಹಿಳೆಯರು ಹೇಳಿದರು.

ಈ ಸಂದರ್ಭದಲ್ಲಿ: ಹನುಮಂತಮ್ಮ ಮಾರಲಭಾವಿ, ಅಮರಮ್ಮ ಮರಳಿ, ಮೀನಾಕ್ಷಮ್ಮ ಮಾರಲಭಾವಿ, ಹೊಳಿಯಮ್ಮ ಮನೆಗಾರ, ಅನ್ನಪೂರ್ಣಮ್ಮ ಮಾರಲಭಾವಿ, ಕರಿಯಮ್ಮ ಕುರುಬರು, ತಾಯಮ್ಮ ಮರಲಭಾವಿ, ಗ್ಯಾನಮ್ಮ ಮರಳಿ, ಈರಮ್ಮ ಭೋವಿ, ಪದ್ದಮ್ಮ ಮಾನೇಗಾರ, ಪದ್ದಮ್ಮ ಭೋವಿ, ಸೇರಿದಂತೆ ಗ್ರಾಮಸ್ಥರು ಇದ್ದರು.

## ಜೆಸ್ಕಾಂ ಅಧಿಕಾರಿಗಳ ನಿರ್ಲಕ್ಷ ಮನೆಯ ಮೆಲೆ ಬಿದ್ದ ಕಂಬ ನಾಲ್ಕು ದಿನಗಳಾದರೂ ಸರಿಪಡಿಸದ ಇಲಾಖೆ

❏ ನೈಜ್ಯ ದೆಸೆ ನ್ಯೂಸ್

ಕವಿತಾಳ: ಕವಿತಾಳ ಪಟ್ಟಣದ ಸಮೀಪ ಇರುವ ಮಸ್ಕಿ ತಾಲೂಕಿನ ಪಾಮನ ಕಲ್ಲೂರು ಪಂಚಾಯಿತಿಗೆ ಒಳಪಡುವ ಚಿಲ್ಕರಾಗಿ ಗ್ರಾಮದಲ್ಲಿ ಕಂಬ ಒಂದು ಮನೆಯ ಮೇಲೆ ಬಿದ್ದು ನಾಲ್ಕು ದಿನಗಳು ಕಳೆದರೂ ಅದನ್ನು ತೆರವುಗೊಳಿಸಿದೆ ಪರ್ಯಾಯ ವ್ಯವಸ್ಥೆಯನ್ನು ಕೂಡ ಮಾಡದೆ ಜೆಸ್ಕಾಂ ಅಧಿಕಾರಿಗಳು ಜನರ ಜೀವದ ಜೊತೆ ಆಟವಾಡುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಚಿಲ್ಕರಾಗಿ ಗ್ರಾಮದಲ್ಲಿ ಬಹಳ ಇಂದಿನ ದಿನಗಳ ಕಂಬ ಒಂದು ಮನೆಯ ಮೇಲೆ ವಾಲಿದ್ದು ಮುಟ್ಟಿದರೆ ಮುರಿದು ಬೀಳುವ ಪರಿಸ್ಥಿತಿ ಇದೆ ವಿದ್ಯುತ್ ಕೂಡ ಹಾಗೆ ಇದೆ ಆದರೆ ನಾಲ್ಕು ದಿನಗಳಿಂದ ಅಧಿಕಾರಿಗಳನ್ನು ಸಂಪರ್ಕಿಸಿದಾಗ ನಾಳೆ



ಬರುತ್ತೇವೆ ಎಂಬ ಉತ್ತರವನ್ನು ಬಿಟ್ಟು ಪರ್ಯಾಯ ವ್ಯವಸ್ಥೆಯನ್ನು ಕೂಡ ಮಾಡಿಲ್ಲ.


ಇಲ್ಲಿಯ ಜನರು ಮಕ್ಕಳು ಮಹಿಳೆಯರು ಆ ದಾರಿಯಲ್ಲಿ ಓಡಾಡಬೇಕಾದರೆ ಜೀವವನ್ನು ಕೈಲಿ ಹಿಡಿದುಕೊಂಡು ಓಡಾಡಿದಂತೆ ಆಗುತ್ತದೆ. ಅಕಸ್ಮಾತಾಗಿ ಜೋರಾದ ಗಾಳಿ ಇರುವುದ-ರಿಂದ ಕಂಬದ ವೈಯರ್ ಕಟ್ಟಾಗಿ ಬಿದ್ದರೆ ಜನರ ಜೀವಕ್ಕೆ ಅಪಾಯವಾದರೆ ಯಾರು ಹೊಣೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈಗಲಾದರೂ ಸಂಬಂಧಪಟ್ಟ ಅಧಿಕಾ-ರಿಗಳು ಇತ್ತಕಡೆ ಗಮನಹರಿಸಿ , ಸರಿಪಡಿಸಿದೆ ಇದ್ದಲ್ಲಿ ಜನರ ಜೀವನಕ್ಕೆ ಏನಾದರೂ ತೊಂದರೆ ಉಂಟಾದರೆ ನೇರ ಅವರೇ ಹೊಣೆಗಾರರು ಎಂದು ಚಿಲ್ಕರಾಗಿಯ ಗ್ರಾಮಸ್ಥರು ಎಚ್ಚರಿಸಿದ್ದಾರೆ.

## ಭಾರತ ಸೇನೆಗೆ ಆಯ್ಕೆಯಾದ ವೀರ ಯೋಧರಿಗೆ ಅಭಿನಂದನೆ,ಗ್ರಾಮಸ್ಥರಿಂದ ಪ್ರಶಂಸೆ

❏ ನೈಜ್ಯ ದೆಸೆ ನ್ಯೂಸ್

ಹಾಲಾಪೂರ: ಶ್ರೀ ವಾಲ್ಮೀಕಿ ಭವನದಲ್ಲಿ ಭಾರತಾಂಬೆಯ ಸೇವೆಗೈಯಲು ಆಯ್ಕೆಯಾದ ಗ್ರಾಮದ ಯುವಕರಾದ ಅಶೋಕ, ಮಾಳಿಂಗರಾಯ, ಗೋಪಾಲ ನಾಗಲದಿನ್ನಿ ಇವರು ಭಾರತ ಸೇನೆಗೆ ಆಯ್ಕೆಯಾಗಿದ್ದು ಹಾಲಾಪೂರ ಗ್ರಾಮಕ್ಕೆ ಹೆಮ್ಮೆಯ ವಿಚಾರ,

ಅದಕ್ಕಾಗಿ ಗ್ರಾಮಸ್ಥರು, ಗೆಳೆಯರ ಬಳಗ,ಕುಟುಂಬವರ್ಗದಿಂದ ಅಭಿನಂದನೆ ಸಮಾರಂಭ ಅದ್ದೂರಿಯಾಗಿ ನಡೆಯಿತು.ಸಾನಿದ್ಯವನ್ನು ಶ್ರೀ ದಂಡಗುಂಡಪ್ಪ ತಾತ ಜಂಗಮರಹಳ್ಳಿ,ಶ್ರೀ ಅಮರಯ್ಯಸ್ವಾಮಿ ಕಾಳಹಸ್ತಿಮಠ,ಶ್ರೀ ಮಂಜುನಾಥಸ್ವಾಮಿ ಹಳೆಕೊಟಿ,ಶ್ರೀ ಕರಿಯಪ್ಪ ಹಿರೆಕುರುಬರ ಹಾಗೂ ಗಣ್ಯರು,ಶಿಕ್ಷಕರು,ಗೆಳಯರು,ಕುಟುಂಬವರ್ಗ ಹೀಗೆ ಅನೇಕರು ವೀರ ಯೋಧರಿಗೆ



ಅಭಿನಂದನೆಯ ಮಳೆ ಹರಿದುಬಂತು,ನಂತರ ಮಾತನಾಡಿದ ಶ್ರೀ ಅಮರಯ್ಯಸ್ವಾಮಿ ದೇಶಕ್ಕೆ ರೈತ ಮತ್ತು ಸೈನಿಕರ ಸೇವೆ ದೊಡ್ಡದು, ರೈತ ಅನ್ನ ಕೊಡುತ್ತಾನೆ,ಸೈನಿಕ ಗಡಿ ಕಾಯ್ದು ನಮ್ಮನ್ನು ರಕ್ಷಿಸುತ್ತಾನೆ ಅವರ ಸೇವೆಯೇ ನಮ್ಮ ರಕ್ಷಣೆ ಅದಕ್ಕೆ ಸೈನಿಕ ಸೇವೆ ಎಂದರೆ ತಾಯಿಯ ಸೇವೆ ಪುಣ್ಯದ ಕಾರ್ಯ ,ಅಂತಹ ಸೇವೆಗೆ ಆಯ್ಕೆಯಾದ ನಿವೆ ಭಾಗ್ಯವಂತರು ಎಂದು ಹೇಳಿದರು. ಇದಕ್ಕೂ ಮೊದಲು ವೀರಯೋಧರನ್ನು ತೆರದ ವಾಹನದಲ್ಲಿ ಕಳಸ,ಡೊಳ್ಳಿನೊಂದಿಗೆ ಮಹಿಳೆಯರು ಸೇರಿ ಮೆರವಣಿಗೆ ಮುಖಾಂತರ ಅದ್ದೂರಿಯಾಗಿ ಪ್ರಮುಖ ಬೀದಿಗಳಲ್ಲಿ ಶ್ರೀ ವಾಲ್ಮೀಕಿ ಭವನಕ್ಕೆ ಕರೆತರಲಾಯಿತು.

## ವಿಶ್ವ ಜನಸಂಖ್ಯಾ ದಿನಾಚರಣೆ ಆಚರಣೆ: "ಕುಟುಂಬ ಯೋಜನೆ ಕೇವಲ ನಿರ್ಬಂಧವಲ್ಲ, ಅದು ಉತ್ತಮ ಜೀವನದ ಹೆಬ್ಬಾಗಿಲು"

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಿಂಧನೂರು ಇವರ ಸಂಯುಕ್ತ ಆಶ್ರಯದಲ್ಲಿ ಅರಗಿನಮರ ಕ್ಯಾಂಪ ಅಂಗನವಾಡಿ ಕೇಂದ್ರದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ಜನಸಂಖ್ಯಾ ಸ್ಫೋಟದಿಂದ ಸಮಾಜದಲ್ಲಿ ನಿರುದ್ಯೋಗ, ವಸತಿ, ಆರೋಗ್ಯ, ಆರ್ಥಿಕ ಹಾಗೂ ಶೈಕ್ಷಣಿಕ ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂದು ತಿಳಿಸಿದರು. ತಾಯಂದಿರು ಮಕ್ಕಳ ನಡುವಿನ ಹೆರಿಗೆಯ ಅಂತರವನ್ನು ಕಾಪಾಡಿಕೊಂಡು




ಕುಟುಂಬ ಯೋಜನೆ ವಿಧಾನಗಳನ್ನು ಅನುಸ-ರಿಸುವುದು ಅತ್ಯಗತ್ಯವಾಗಿದೆ. ಇದರಿಂದ ತಾಯಿ ಮತ್ತು ಮಗುವಿನ ಆರೋಗ್ಯ ಉತ್ತಮವಾಗುವುದರ ಜೊತೆಗೆ ಕುಟುಂಬದ ಜೀವನಮಟ್ಟವೂ ಸುಧಾರಿಸುತ್ತದೆ ಎಂದು ಹೇಳಿದರು.

ಕುಟುಂಬ ಯೋಜನೆಯ ತಾತ್ಕಾಲಿಕ ವಿಧಾನಗಳಾದ ಕಾಪರ್-ಟಿ, ಅಂತರ ಇಂಜೆಕ್ಷನ್, ಮಾಲಾ-ಎನ್, ಛಾಯಾ ಮಾತ್ರೆಗಳು ಹಾಗೂ ನಿರೋಧದಂತಹ ಸುರಕ್ಷಿತ ವಿಧಾನಗಳನ್ನು ಬಳಸುವಂತೆ ಅವರು ಸಲಹೆ ನೀಡಿದರು. ಇನ್ನು ಮುಂದೆ ಮಕ್ಕಳ ಅಗತ್ಯವಿಲ್ಲ ಎಂದು ನಿರ್ಧರಿಸಿದ ದಂಪತಿಗಳು ಲ್ಯಾಪ್ರೋಸ್ಕೋಪಿ ಹಾಗೂ ಟ್ಯೂಬೆಕ್ಟಮಿ ಸೇರಿದಂತೆ ಶಾಶ್ವತ ಕುಟುಂಬ ಯೋಜನೆ ವಿಧಾನಗಳನ್ನು ಅನುಸರಿಸುವ ಮೂಲಕ ಜನಸಂಖ್ಯೆ ನಿಯಂತ್ರಣಕ್ಕೆ ಕೈಜೋಡಿಸಬೇಕು ಎಂದು ತಿಳಿಸಿದರು.

ಈ ವರ್ಷದ ವಿಶ್ವ ಜನಸಂಖ್ಯಾ ದಿನದ ಘೋಷವಾಕ್ಯ "ಯುವಜನರ ಭರವಸೆಗಳು ಮತ್ತು ಆಕಾಂಕ್ಷೆಗಳನ್ನು ನನಸಾಗಿಸುವುದು ಇಂದು ಮತ್ತು ಭವಿಷ್ಯಕ್ಕಾಗಿ" ಎಂಬುದನ್ನು ಉಲ್ಲೇಖಿಸಿದ ಅವರು, ಜನಸಂಖ್ಯೆ ನಿಯಂತ್ರಣದಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿಯನ್ನು ಅರಿತು ಭಾಗವಹಿಸಬೇಕೆಂದು ಕರೆ ನೀಡಿದರು.

ಜಾಗೃತಿ ಮಹಿಳಾ ಸಂಘಟನೆಯ ದೇವಿಪುತ್ರಪ್ಪ ಅವರು ಮಾತನಾಡಿ, ತಾಯಂದಿರು ಮಕ್ಕಳ ನಡುವಿನ ಅಂತರವನ್ನು ಕಾಪಾಡಿಕೊಳ್ಳುವುದರ ಜೊತೆಗೆ ಗರ್ಭಾವಸ್ಥೆಯಲ್ಲಿ ಪೌಷ್ಟಿಕ ಆಹಾರ ಸೇವಿಸಿ, ಹೆರಿಗೆಯ ನಂತರ ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ನೀಡುವುದ-ರಿಂದ ತಾಯಿ ಮತ್ತು ಮಗುವಿನ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬಹುದು ಎಂದರು. ಜನಸಂಖ್ಯೆ ನಿಯಂತ್ರಣದಲ್ಲಿ ಮಹಿಳೆಯರು ಹಾಗೂ ಪುರುಷರು ಸಮಾನವಾಗಿ ಪಾಲ್ಗೊಳ್ಳಬೇಕು. ಗಂಡು ಅಥವಾ ಹೆಣ್ಣು ಮಗುವಿನ ಮೇಲಿನ ಒಲವಿನಿಂದ ಕುಟುಂಬದ ಗಾತ್ರವನ್ನು ಹೆಚ್ಚಿಸುವ ಮನೋಭಾವವನ್ನು ತೊರೆದು, "ಚಿಕ್ಕ ಕುಟುಂಬ ಸುಖೀ ಕುಟುಂಬ" ಎಂಬ ಧ್ಯೇಯವನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ಸುರಕ್ಷಾ ಅಧಿಕಾರಿ ನಿಂಗಮ್ಮ, ಆಶಾ ಕಾರ್ಯಕರ್ತೆ ಮಹೇಶ್ವರಿ, ಜಾಗೃತಿ ಮಹಿಳಾ ಸಂಘಟನೆಯ ಸದಸ್ಯರು, ಅಂಗನವಾಡಿ ಕಾರ್ಯಕರ್ತೆಯರಾದ ರೂಪಾ ಮತ್ತು ಬಸವಂತಮ್ಮ, ತಾಯಂದಿರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### ಕನಸು

ಕನಸು ಎಂದರೆ ಕಣ್ಣಿನ ಬೆಳಕು,
ಬದುಕಿನ ಪಯಣದ ಆಶೆಯ ಚಿಲುಮೆ.
ಮನದಾಳದಲ್ಲಿ ಮೊಳಕೆಯೊಡೆಯುವ ಬಯಕೆ,
ಭವಿಷ್ಯದ ದಾರಿಗೆ ದೀಪವಾಗುವ ನೆಲೆ.

ಕನಸುಗಳು ಕೇವಲ ಕಲ್ಪನೆಯಲ್ಲ,
ಸಾಧನೆಯ ಶಿಖರದ ಮೊದಲ ಹೆಜ್ಜೆ.
ಶ್ರಮದ ಬೆವರ ಹನಿಗಳು ಸೇರಿದಾಗ,
ಅವು ಯಶಸ್ಸಿನ ಹೂವಾಗಿ ಅರಳುವವು.

ಸೋಲು ಬಂದರೂ ಕುಗ್ಗದ ಮನಸ್ಸು,
ಗೆಲುವಿನತ್ತ ಮುನ್ನಡೆಯುವ ಧೈರ್ಯ.
ನಂಬಿಕೆ ಎಂಬ ಬಲ ಜೊತೆಯಾದರೆ,
ಯಾವ ಅಡೆತಡೆಯೂ ಅಸಾಧ್ಯವಲ್ಲ.

ಆಕಾಶದಷ್ಟು ಎತ್ತರದ ಗುರಿಯಿರಲಿ,
ಸಮುದ್ರದಷ್ಟು ಆಳದ ವಿಶ್ವಾಸವಿರಲಿ.
ಪ್ರತಿ ಹೆಜ್ಜೆಯಲ್ಲೂ ಪರಿಶ್ರಮ ಬೆರೆತರೆ,
ಪ್ರತಿ ಕನಸೂ ನನಸಾಗುವುದು ಖಚಿತ.

ಕತ್ತಲೆಯ ರಾತ್ರಿ ಎಷ್ಟೇ ದೀರ್ಘವಾದರೂ,
ಬೆಳಗಿನ ಸೂರ್ಯ ಉದಯಿಸುವುದು ನಿಶ್ಚಿತ.
ಹಾಗೆಯೇ ಕಷ್ಟಗಳು ಎಷ್ಟೇ ಬಂದರೂ,
ಸಹನೆಯಿಂದ ಯಶಸ್ಸು ಅರಳುವುದು ಸತ್ಯ.

ಕನಸು ಕಾಣುವುದು ಬದುಕಿನ ಶಕ್ತಿ,
ಅದನ್ನು ನನಸಾಗಿಸುವುದು ನಮ್ಮ ಕರ್ತವ್ಯ.
ಧೈರ್ಯವೇ ನಮ್ಮ ದೊಡ್ಡ ಸಂಪತ್ತು,
ಶ್ರಮವೇ ಯಶಸ್ಸಿನ ನಿಜವಾದ ಮಂತ್ರ.

ಇಂದು ಬಿತ್ತಿದ ಕನಸಿನ ಬೀಜ,
ನಾಳೆ ಯಶಸ್ಸಿನ ಮರವಾಗಿ ಬೆಳೆಯುತ್ತದೆ.
ಆದ್ದರಿಂದ ಆತ್ಮವಿಶ್ವಾಸದಿಂದ ಮುನ್ನಡೆಯೋಣ,
ಕಂಡ ಪ್ರತಿಯೊಂದು ಕನಸನ್ನೂ ನನಸಾಗಿಸೋಣ.

## "ಎಚ್‌ಪಿವಿ ಲಸಿಕೆ ಬಾಲಕಿಯರು ಕಡ್ಡಾಯವಾಗಿ ಪಡೆಯಬೇಕು"

❑ ನೈಜ್ಯ ದೆಸೆ ನ್ಯೂಸ್

ಕವಿತಾಳ: '14–15 ವರ್ಷದ ಬಾಲಕಿಯರು ಎಚ್‌ಪಿವಿ ಲಸಿಕೆಯನ್ನು




ಕಡ್ಡಾಯವಾಗಿ ಪಡೆಯಬೇಕು' ಎಂದು ರಾಷ್ಟ್ರೀಯ ಬಾಲಸ್ವಾಸ್ಥ್ಯ ಯೋಜನೆ ವೈದ್ಯಾಧಿಕಾರಿ ಡಾ.ಶ್ರೀಧರ ಇಲ್ಲೂರು ಹೇಳಿದರು. ಪಟ್ಟಣದ ಉರ್ದು ಸರ್ಕಾರಿ ಪ್ರೌಢ ಹಾಗೂ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ನಡೆದ ಮಕ್ಕಳ ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾತನಾಡಿ 'ಗರ್ಭ ಕಂಠ ಕ್ಯಾನ್ಸರ್ ತಡೆಗಟ್ಟುವ ನಿಟ್ಟಿನಲ್ಲಿ ಲಸಿಕೆಯನ್ನು ಉಚಿತವಾಗಿ ನೀಡಲಾಗುತ್ತಿದೆ' ಎಂದರು. ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಲಾಯಿತು. 'ನಮ್ಮ ಕ್ಲಿನಿಕ್‌ನ ಪ್ರಯೋಗಾಲಯ ತಂತ್ರಜ್ಞ ಹನುಮಂತ ಹೀರಾ, ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಸುಮಿತ್ರಾ, ಮುಖ್ಯಶಿಕ್ಷಕರಾದ ಮುಬೀನ್, ಮಹಮ್ಮದ್ ರಫೀಕ್ ಶಿರೂರ, ಶಿಕ್ಷಕರಾದ ಹಲೀಮಾ ಬೇಗಂ, ಮಹಿಬೂಬ್ ಪಾಷಾ, ಶರಣೆಗೌಡ ಮತ್ತಿತರರು ಉಪಸ್ಥಿತರಿದ್ದರು.

## ಪತ್ರಕರ್ತರೊಂದಿಗೆ ಚುನಾವಣಾಧಿಕಾರಿಗಳ ಉದಾಸೀನತೆ: ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ : ಜಾಲಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಚುನಾವಣಾ ವರದಿಗಾರಿಕೆಗೆ ತೆರಳಿದ್ದ ಸ್ಥಳೀಯ ಪತ್ರಕರ್ತರನ್ನು ಚುನಾವಣಾಧಿಕಾರಿಯೂ ಆದ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಜೇಂದ್ರ ಕುಮಾರ್ ಅವರು ನಿರ್ಲಕ್ಷಿಸಿದ ಘಟನೆ ನಡೆದಿದ್ದು, ಇದರಿಂದ ಪತ್ರಕರ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕೆಲಕಾಲ ಸ್ಥಳದಲ್ಲಿ ವಾಗ್ವಾದವೂ ನಡೆಯಿತು. ಈ ವೇಳೆ ಚುನಾವಣಾಧಿಕಾರಿಯವರು ಘಟನೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೇ (ಕಆಔ) ಕಾರಣ ಎಂದು ಹೇಳಿರುವುದಾಗಿ ಪತ್ರಕರ್ತರು ಆರೋಪಿಸಿದರು.

# "ಪ್ರಕೃತಿ ವಿಕೋಪಕ್ಕೆ ಬೆಳೆ ವಿಮೆ ಆಸರೆಯಾಗಿದೆ"

## ರೈತರ ಬರ ಪರಿಸ್ಥಿತಿ, ಅತೀ ವೃಷ್ಟಿಗೆ ಬೆಳೆ ಹಾನಿ ಪರಿಹಾರ ವಿಮೆ ಒದಗಿಸುತ್ತದೆ.

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಮಳೆ ಕೊರತೆ, ಪ್ರವಾಹ, ಬರ, ಬಿರುಗಾಳಿ ಸೇರಿದಂತೆ ಪ್ರಕೃತಿ ವಿಕೋಪಗಳಿಂದ ಬೆಳೆಯ ಹಾನಿಗೊಳಗಾದ ಸಂದರ್ಭದಲ್ಲಿ ರೈತರಿಗೆ ಆರ್ಥಿಕ ಭದ್ರತೆ ಒದಗಿಸಲು ಬೆಳೆ ವಿಮೆ ಯೋಜನೆ ಮಹತ್ವದ ಆಸರೆಯಾಗಿದೆ ಎಂದು ಹಿರೇಕೋಟ್ನೆಕಲ್ ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಸ್. ಸುರೇಂದ್ರ ಹೇಳಿದರು.**

ತಾಲೂಕಿನ ಹಿರೇಕೋಟ್ನೆಕಲ್ ಗ್ರಾಮದಲ್ಲಿ ರೈತರಿಗೆ ಫಸಲ್ ಭೀಮಾ ಯೋಜನೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಯೋಜನೆಯ ಕರಪತ್ರಗಳನ್ನು ವಿತರಿಸಿ ಅವರು ಮಾತನಾಡಿದರು.

ರೈತರು ಹವಾಮಾನ ವೈಪರೀತ್ಯದಿಂದ ಬೆಳೆ ಹಾನಿ ಅನುಭವಿಸಿದಾಗ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಸಂದರ್ಭದಲ್ಲಿ ಬೆಳೆ ವಿಮೆ ಪರಿಹಾರವು ಮುಂದಿನ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ನೆರವಾಗುತ್ತದೆ. ಆದ್ದರಿಂದ ರೈತರು ನಿರ್ಲಕ್ಷ್ಯ ಮಾಡದೆ ನಿಗದಿತ ಅವಧಿಯೊಳಗೆ ತಮ್ಮ ಬೆಳೆಗಳಿಗೆ ಕಡ್ಡಾಯವಾಗಿ ವಿಮೆ



ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

2026–27ನೇ ಸಾಲಿನಲ್ಲಿ ರೈತರು ಬೆಳೆದ ವಿವಿಧ ಬೆಳೆಗಳಿಗೆ ಮಳೆ, ಪ್ರವಾಹ, ಬರ, ಗಾಳಿ ಹಾಗೂ ಇತರ ಪ್ರಕೃತಿ ವಿಕೋಪಗಳಿಂದ ಉಂಟಾಗುವ ನಷ್ಟಕ್ಕೆ ಪರಿಹಾರ ಪಡೆಯಲು ಪ್ರಾಥಮಿಕ ಪತ್ತಿನ ಸಹಕಾರ ಸಂಘದ ಮೂಲಕ ಬೆಳೆ ವಿಮೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ ಎಂದು ತಿಳಿಸಿದರು.

ವಿಮೆ ಯೋಜನೆಗೆ ಅರ್ಜಿ ಸಲ್ಲಿಸಲು ರೈತರು ಆಧಾರ್ ಕಾರ್ಡ್, ಜಮೀನಿನ ಪಹಣಿ, ಬ್ಯಾಂಕ್ ಪಾಸ್‌ಬುಕ್ ಹಾಗೂ ಎಫ್‌ಐಡಿ ಸಂಖ್ಯೆಯನ್ನು ಒದಗಿಸಬೇಕು. ನಿಗದಿತ ವಿಮಾ ಕಂತನ್ನು ಪಾವತಿಸಿ ಅರ್ಜಿಯನ್ನು ಸಲ್ಲಿಸುವ ಮೂಲಕ ಯೋಜನೆಯ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಬೆಳೆ ವಿಮೆಗೆ ನೋಂದಣಿ ಮಾಡುವಾಗ ರೈತರು ತಮ್ಮ ಜಮೀನಿನ ವಿವರ, ಬೆಳೆದಿರುವ ಬೆಳೆ ಮತ್ತು ಬ್ಯಾಂಕ್ ಖಾತೆಯ ಮಾಹಿತಿಯನ್ನು ಸರಿಯಾಗಿ ದಾಖಲಿಸಬೇಕು. ದಾಖಲೆಗಳಲ್ಲಿ ವ್ಯತ್ಯಾಸವಿದ್ದರೆ ವಿಮಾ ಪರಿಹಾರ ಪಡೆಯುವ ಸಂದರ್ಭದಲ್ಲಿ ತೊಂದರೆ ಉಂಟಾಗುವ ಸಾಧ್ಯತೆ ಇರುವುದರಿಂದ ಅರ್ಜಿ ಸಲ್ಲಿಸುವ ಮೊದಲು ಎಲ್ಲ ಮಾಹಿತಿಯನ್ನು ಪರಿಶೀಲಿಸಿಕೊಳ್ಳಬೇಕು ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ದೇವರೆಡ್ಡಿ ಫಸಲ್ ಭೀಮಾ ಯೋಜನೆಯ ಅರ್ಹತೆ, ಅಗತ್ಯ ದಾಖಲೆಗಳು, ವಿಮಾ ಕಂತು ಪಾವತಿ ಹಾಗೂ ಅರ್ಜಿ ಸಲ್ಲಿಸುವ ವಿಧಾನ ಕುರಿತು ರೈತರಿಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಎಸ್. ಹನುಮಂತಗೌಡ, ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರು, ಸಿಬ್ಬಂದಿ ಹಾಗೂ ಗ್ರಾಮದ ರೈತರು ಉಪಸ್ಥಿತರಿದ್ದರು.

# "ವಿಬಿ ಜೀ ರಾಮ್ ಜಿ ಯೋಜನೆ ನಿಯಮ ಉಲ್ಲಂಘಿಸಿದ ಪಿಡಿಓ ಅಮಾನತ್ತಿಗೆ ಆಗ್ರಹ"



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ತಾಲೂಕಿನ ಹಾಲಾಪೂರು ಗ್ರಾಮ ಪಂಚಾಯಿತಿ ಪಿಡಿಓ ವಿಶ್ವನಾಥ ಹೂಗಾರ 2026–27 ಸಾಲಿನ ವಿಬಿ–ಜಿ ರಾಮ್ ಜಿ ಯೋಜನೆಯ ಕ್ರಿಯಾ ಯೋಜನೆಯನ್ನು ಗ್ರಾಮ ಸಭೆ ಮಾಡದೆ ತಯಾರಿಸಿದ್ದಾರೆ.**

ಆ ಕ್ರಿಯಾ ಯೋಜನೆಯನ್ನು ರದ್ದುಪಡಿಸಿ ಸದರಿ ಯೋಜನೆಯ ಕ್ರಿಯಾ ಯೋಜನೆಯನ್ನು ಗ್ರಾಮ ಸಭೆ ಮೂಲಕ ತಯಾರಿಸಬೇಕು ಎಂಬ ನಿಯಮವಿದ್ದರೂ ಸಹ ಇಲ್ಲಿನ ಅಧಿಕಾರಿಯು ಸರ್ಕಾರದ ನಿಯಮಗಳನ್ನು ಉಲ್ಲಂಘನೆ ಮಾಡಿದ ಪಿಡಿಓ ವಿಶ್ವನಾಥ ಹೂಗಾರರನ್ನು ಅಮಾನತ್ತು ಮಾಡಬೇಕೆಂದು ಆಗ್ರಹಿಸಿ ಜುಲೈ 23 ರಂದು ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದು ಎಂದು ತಾಲ್ಲೂಕ ಪಂಚಾಯತ ಇಲಾಖೆ ಸಹಾಯಕ ನಿರ್ದೇಶಕರಾದ ಸೋಮನಗೌಡರಿಗೆ ಹಾಲಾಪುರು ಹೋರಾಟ ಸಮಿತಿ ಮುಖಂಡರುಗಳು ಮನವಿ ಪತ್ರ ಸಲ್ಲಿಸಿದರು.

ಸದರಿ ಗ್ರಾಮ ಪಂಚಾಯತಿ ಪಿಡಿಓ ವಿಶ್ವನಾಥ ಹೂಗಾರ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿರುವುದಲ್ಲದೆ, ಮನ ಬಂದಂತೆ ವರ್ತಿಸುತ್ತಿದ್ದಾರೆ. ಇಂತಹ ಅಧಿಕಾರಿಗಳನ್ನು ಈ ಕೂಡಲೇ ಅಮಾನತ್ತುಗೊಳಿಸಿ ಮತ್ತು ಈಗಾಗಲೆ ಅನಧಿಕೃತವಾಗಿ ತಯಾರಿಸಿದ ಕ್ರಿಯಾ ಯೋಜನೆಯನ್ನು ರದ್ದುಪಡಿಸಬೇಕು. ನಿಯಮಾನುಸಾರವಾಗಿ ಗ್ರಾಮಸಭೆ ಮಾಡಿ ಕ್ರಿಯಾ ಯೋಜನೆಯನ್ನು ತಯಾರಿಸಬೇಕು ಒಂದು ವೇಳೆ ರದ್ದುಪಡಿಸದೇ ನಿರ್ಲಕ್ಷ್ಯ ಧೋರಣೆ ಅನುಸರಿಸಿದರೆ ಜುಲೈ 23 ರಂದು ಹೋರಾಟ ಸಮಿತಿ ಹಾಲಾಪೂರ ವತಿಯಿಂದ ಧರಣಿ ಸತ್ಯಾಗ್ರಹ ಹಮ್ಮಿ ಕೊಳ್ಳಲಾಗುವುದು ಹೋರಾಟಗಾರರು ಎಚ್ಚರಿಕೆ ನೀಡಿದರು.

ಇದಲ್ಲದೆ ಗ್ರಾಮ ಪಂಚಾಯಿತಿಯಲ್ಲಿ ಅತಿ ಜರೂರಾಗಿ "ಡಾಟಾ ಎಂಟ್ರಿ" ಅಪರೇಟರ್ ನೇಮಕ ಮಾಡಬೇಕು, ಪಂಚಾಯತ್ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಗ್ರಾಮಗಳಿಗೆ ಜರೂರಾಗಿ ಕೆಲಸ ನೀಡಬೇಕು, ಹಾಲಾಪೂರು ಗ್ರಾಮದ 2ನೇ ವಾರ್ಡನ ಎಸ್‌ಸಿ ಓಣಿಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಬಸವಣ್ಣ ಕ್ಯಾಂಪ್ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ, ಯದ್ದಲದಿನ್ನಿ ಗ್ರಾಮದ ಎಸ್‌ಸಿ ಸಮಾಜದ ರುದ್ರ ಭೂಮಿಯಲ್ಲಿ ಜಂಗಲ್ ಕಟಿಂಗ್, ಹಿರೇಕಡಬೂರು ಗ್ರಾಮದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಹಂಚಿನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಟದ ಮೈದಾನ ಸಮತಟ್ಟು ಮಾಡುವುದು, ಹಿರೇಕಡಬೂರು ಗ್ರಾಮದಲ್ಲಿ ಹೊಸದಾಗಿ ಅಂಗನವಾಡಿ ಕಟ್ಟಡ ನಿರ್ಮಿಸುವುದು, ಎಮ್.ರಾಮಲದಿನ್ನಿ ಗ್ರಾಮದಲ್ಲಿ ಚರಂಡಿ ನಿರ್ಮಾಣ ಮಾಡುವುದು ಸೇರಿದಂತೆ ಗ್ರಾಮ ಪಂಚಾಯಿತಿಯಲ್ಲಿ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮಗಳಲ್ಲಿನ ಸಮಸ್ಯೆಗಳನ್ನು ಬಗೆಹರಿಸಿ, ಸೌಲಭ್ಯಗಳನ್ನು ಒದಗಿಸಲು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕುಮಾರ.ಎಮ್ ರಾಮಲದಿನ್ನಿ, ಬಸವರಾಜ ಯದ್ಧಲದಿನ್ನಿ, ಚಂದಪ್ಪ ಯದ್ಧಲದಿನ್ನಿ, ದುರಗಪ್ಪ ಜಂಗಮರಹಳ್ಳಿ, ಆರೋಗ್ಯ ಯದ್ಧಲದಿನ್ನಿ, ಶರಣಬಸವ ಹಾಲಾಪೂರ, ಸುಭಾಷ್ ಹಿರೇಕಡಬೂರ, ಉಮಾಪತಿ ಹಿರೇಕಡಬೂರ ಬಸವರಾಜ ಹಿರೇಕಡಬೂರ, ಸೇರಿದಂತೆ ಗ್ರಾಮಸ್ಥರು ಇದ್ದರು.

# ಕೈಕೊಟ್ಟ ಮುಂಗಾರು ಮಳೆ ಬರಿದಾದ ನದಿ ನೀರು ನೀರಿಲ್ಲದೇ ಒಣಗಿದ ಪಂಪ್‌ಸೆಟ್ ಆಧಾರಿತ ಭತ್ತದ ಬೆಳೆಗಳು

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಈ ಬಾರಿಯ ಮುಂಗಾರು ಮಳೆ ಮರಿಚಿಕೆಯಾದ ಹಿನ್ನಲೆ ಕಂಪ್ಲಿ ತಾಲೂಕು ವ್ಯಾಪ್ತಿಯ ಪಂಪ್‌ಸೆಟ್ ಆಧರಿಸಿದ ರೈತರ ಜಮೀನುಗಳಲ್ಲಿ ಬೆಳೆದ ಭತ್ತದ ಬೆಳೆಗಳು ನೀರಿಲ್ಲದೇ, ಸಂಪೂರ್ಣವಾಗಿ ಒಣಗಿದ್ದು, ರೈತರು ಕಂಗಾಲಾಗಿದ್ದಾರೆ.**

ಕಂಪ್ಲಿ ಪಟ್ಟಣ, ನದಿ ತೀರದ ಗ್ರಾಮೀಣ ಭಾಗದಲ್ಲಿ ಸುಮಾರು ಸಾವಿರಾರು ಎಕರೆ ಪ್ರದೇಶದಲ್ಲಿ ಕೃಷಿ ಆಶ್ರಿತ ಭೂಮಿಯಲ್ಲಿ ಪಂಪ್‌ಸೆಟ್ ನಂಬಿ ಬೆಳೆದ ಭತ್ತ ಬೆಳೆಗಳು ನೀರಿಲ್ಲದೇ ಬಣಗುಡುತ್ತಿವೆ. ಮೂರು ರಾಜ್ಯದ ಜೀವನಾಡಿ ತುಂಗಭದ್ರ ಜಲಾಶಯದಲ್ಲಿ ನೀರಿನ ಸಂಗ್ರಹ ಇಲ್ಲದಂತಾಗಿರುವುದು ಮೇಲ್ಭಾಗದ ಮಲೆನಾಡಿನಲ್ಲಿ ಮಳೆ ಬಾರದೇ ಇರುವುದು ಮುಖ್ಯ ಕಾರಣವಾಗಿದೆ. ಇದರಿಂದ ಜಲಾಶಯದ ನದಿಯಲ್ಲಿ ನೀರು ಸಂಪೂರ್ಣವಾಗಿ ಬತ್ತಿದ್ದು, ಜಲಚರ ಪ್ರಾಣಿಗಳ ಜೀವಕ್ಕೆ ಜಲಕಂಟಕವಾಗಿದೆ. ಇದರಿಂದ ಅನ್ನದಾತರ ಜೀವನವೂ ದುಸ್ಥರವಾಗಿದೆ. ಕಳೆದ ಒಂದು ತಿಂಗಳ ಹಿಂದೇ ನದಿಯಲ್ಲಿ ನೀರು ಹರಿದ ಹಿನ್ನಲೆ ಈ ಭಾಗದ ರೈತರು ಬೋರ್‌ವೇಲ್ ಮೂಲಕ ಜಮೀನುಗಳಿಗೆ ನೀರು ಹರಿಸಿಕೊಂಡು ಸಸಿ ಮಡಿಗಳನ್ನು ಹಾಕಿ, ನಂತರ ಭತ್ತ ನಾಟಿ ಮಾಡಿ ಒಂದು ವರೆ ತಿಂಗಳಾಗಿದೆ. ಇಲ್ಲಿತನ ನೀರಿನ ಸಮಸ್ಯೆ ತಲೆ ದೋರಿದ್ದಿಲ್ಲ. ಆದರೆ, ಈಗ ನದಿಯಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಇಳಿಮುಖವಾಗಿದ್ದು,



ರೈತರ ಬೆಳೆಗಳಿಗೆ ನೀರಿನ ಕಂಟಕ ಎದುರಾಗಿದೆ.

ಕಂಪ್ಲಿ, ಎಮ್ಮಿಗನೂರು, ಮಣ್ಣೂರು ಸೂಗೂರು, ರಾಮಚಂದ್ರಪುರ ಕ್ಯಾಂಪ್, ಸಣಾಪುರ, ಇಟಗಿ, ನಂ.2 ಮುದ್ದಾಪುರ ಸೇರಿದಂತೆ ನದಿ ಬಳಿಯಲ್ಲಿರುವ ಪಂಪ್‌ಸೆಟ್ ಆಧರಿಸಿದ ಸಾವಿರಾರು ಎಕರೆ ಪ್ರದೇಶದ ಜಮೀನುಗಳಲ್ಲಿ ಭತ್ತ ಬೆಳೆ ಬೆಳೆಯಲಾಗಿದೆ. ಪ್ರಥಮ ಹಂತದಲ್ಲಿ ಭೂಮಿ ಹದ ಮಾಡುವುದರಿಂದ ಸಸಿ ಬೆಳವಣಿಗೆಗೆ ಮತ್ತು ನಂತರದ ನಾಟಿಯಿಂದ ಹಿಡಿದು ಒಂದು ವರೆ ತಿಂಗಳವರೆಗೆ ಗೊಬ್ಬರದೊಂದಿಗೆ ಸುಮಾರು 25 ಸಾವಿರಕ್ಕೂ ಹೆಚ್ಚು ಖರ್ಚು ಮಾಡಿದ್ದು, ಈಗ ಬೆಳೆದ ಬೆಳೆ ತೆಗೆದುಕೊಳ್ಳಲು ಹರಸಾಹಸ ಪಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ನದಿಯಲ್ಲಿ ನೀರಿನ ಹರಿವು ಬತ್ತಿದ್ದು, ಬೆಳೆಗಳಿಗೆ ನೀರು ಹರಿಸುವುದು ಹೇಗಪ್ಪಾ ಎಂಬ ಚಿಂತೆ ರೈತರಾದ್ದಾಗಿದೆ. ಬೆಲೆ ಏರಿಕೆ ಬಿಸಿ : ಮಧ್ಯಪ್ರಾಚ್ಯದ ಯುದ್ದದಿಂದಾಗಿ



ಡಿಸೇಲ್, ಪೆಟ್ರೋಲ್, ರಸಗೊಬ್ಬರ ಬೆಲೆಗಳು ಗಗನಕ್ಕೇರಿದ್ದು, ಇದರ ನಡುವೆ ಅನಿವಾರ್ಯವಾಗಿ ಬೆಳೆಗಳನ್ನು ಬೆಳೆದಿದ್ದಾರೆ. ಇಂದಿನ ದಿನಮಾನದಲ್ಲಿ ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ಇಲ್ಲದ ಪರಿಣಾಮ ಇಂದಿನ ಬೆಲೆ ಏರಿಕೆ ಮಧ್ಯದಲ್ಲಿ ರೈತರ ಬದುಕು ದುಸ್ಥರವಾಗಿದೆ.

ರೈತರ ಸಂಕಷ್ಟ : ಕಳೆದ ಬಾರಿ ಕ್ರಸ್ಟ್ ಗೇಟ್ ಕಟ್ಟಾದ ಪರಿಣಾಮ ಎರಡನೇ ಬೇಸಿಗೆ ಬೆಳೆ ಇಲ್ಲದೇ ರೈತರು ಸಂಕಷ್ಟ ಎದುರಿದ್ದರು. ಈಗ ಜಲಾಶಯದ ಹೊಸ ಕ್ರಸ್ಟ್ ಗೇಟ್‌ಗಳನ್ನು ಅಳವಡಿಸಿದ ಹಿನ್ನಲೆ ಈ ಬಾರಿಯಾದರೂ ರೈತರ ಬದುಕಿಗೆ ಬೆಳೆಗಳು ಆಸರೆಯಾಬಹುದು ಎಂಬ ನಿರೀಕ್ಷೆಯನ್ನು ಹೊಂದಿದ್ದರು. ಆದರೆ, ಈ ಸಲ ವಾಡಿಕೆಗಿಂತ ಮಳೆ ಕೈಕೊಟ್ಟ ಪರಿಣಾಮ ಮುಂಗಾರು ಬೆಳೆಗೆ ನೀರಿಲ್ಲದಂತಾಗಿದ್ದು, ಮತ್ತು ನದಿಯಲ್ಲಿ ನೀರಿನ ಪ್ರಮಾಣ ಬತ್ತಿ ಹೋಗಿದೆ. ನದಿ ನೀರನ್ನೇ ಅವಲಂಭಿಸಿದ ರೈತರು ಪಂಪ್‌ಸೆಟ್

**ಎಮ್ಮಿಗನೂರು ಗ್ರಾಮದ ಸೂಗೂರು ರಸ್ತೆಯ ಪಂಪ್‌ಸೆಟ್ ಆಧಾರದಲ್ಲಿ ಸುಮಾರು 50ಕ್ಕೂ ಹೆಚ್ಚು ಎಕರೆ ಜಮೀನಿನಲ್ಲಿ ಭತ್ತ ಬೆಳೆ ಬೆಳೆಯಲಾಗಿದೆ. ಆದರೆ, ಈಗ ಪಂಪ್‌ಸೆಟ್‌ನಲ್ಲಿ ನೀರಿಲ್ಲದೇ ಇರುವುದರಿಂದ ಬೆಳೆಗಳು ಒಣಗುತ್ತಿದೆ. ಇದರಿಂದ ಬೆಳೆ ರಕ್ಷಣೆ ಮಾಡಿಕೊಳ್ಳುವುದು ಕಷ್ಟಕರವಾಗಿದೆ. ಆದ್ದರಿಂದ ನದಿಗೆ ನೀರು ಬಿಟ್ಟರೇ, ಪಂಪ್‌ಸೆಟ್ ಬೆಳೆಗಳಿಗೆ ನೀರು ಒದಗಿಸಲು ಸಾಧ್ಯ.**

**ಮಲ್ಲಿಕಾರ್ಜುನರಾವ್, ರೈತ, ಎಮ್ಮಿಗನೂರು.**

ಮೂಲಕ ಭತ್ತದ ನಾಟಿ ಮಾಡಿ, ಬೆಳೆಗಳನ್ನು ಬೆಳೆಸಿದ್ದರು. ಆದರೆ, ಈಗ ನದಿಯಲ್ಲಿ ನೀರು ಇಲ್ಲದಂತಾಗಿದ್ದು, ಬೆಳೆ ಉಳಿಸಿಕೊಳ್ಳಲು ರೈತರು ಹರಸಾಹಸ ಪಡುವಂತಾಗಿದ್ದು, ರೈತರ ಬದುಕು ಉಳಿಸಲು ನದಿಗೆ ನೀರು ಹರಿಸುವ ಅವಶ್ಯಕತೆ ಇದೆ.

ಅಂತರ್ಜಲ ಕುಸಿತ : ಈಗಾಗಲೇ ಜಲಾಶಯದಲ್ಲಿ ನೀರು ಇಲ್ಲದೇ ಇರುವುದು ನದಿಯಲ್ಲಿ ನೀರು ಬತ್ತಿದ್ದು, ಇದರಿಂದ ಅಂತರ್ಜಲವೂ ಕೂಡ ಸಂಪೂರ್ಣವಾಗಿ ಕುಸಿದಿದೆ. ಇದರಿಂದ ರೈತರು ಬದುಕು ಅತಂತ್ರದಲ್ಲಿ ಸಾಗುವ ಜೊತೆಗೆ ಚಿಂತೆಗೀಡು ಮಾಡಿದೆ. ಒಟ್ನಲ್ಲಿ ಭತ್ತದ ಬೆಳೆ ಬೆಳೆದ ರೈತರ ಬದುಕು ಸಂಕಷ್ಟದಲ್ಲಿ ದೂಡಿದ್ದು, ನದಿಗೆ ನೀರು ಹರಿಸಿದರೆ, ರೈತರ ಜಮೀನುಗಳಿಗೆ ಕಳೆ ಬರುವ ಜೊತೆಗೆ ಬೆಳೆಗಳನ್ನು ಉಳಿಸಲು ಸಾಧ್ಯ ಎನ್ನುವಂತಿದೆ.

# ಮಳೆಗಾಗಿ ಪಾದಯಾತ್ರೆ, ಭಜನೆ, ಹರಕೆ, ಪೂಜೆ ಸಲ್ಲ! ವೈಜ್ಞಾನಿಕ ಕ್ರಮ ಮತ್ತು ಜನಪರ ನೀತಿಗಳೇ ಪರಿಹಾರ!

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಮಳೆ ಕೊರತೆಯಿಂದ ರೈತರು, ಕೃಷಿ ಕೂಲಿ ಕಾರ್ಮಿಕರು ಹಾಗೂ ಗ್ರಾಮೀಣ ಜನತೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆಗಳು ಒಣಗಿ ಹೋಗುತ್ತಿದ್ದು, ನೀರಿನ ಸಮಸ್ಯೆ ಉಲ್ಬಣವಾಗುತ್ತಿದೆ.**

ಗ್ರಾಮೀಣ ಜನರು ಉದ್ಯೋಗಕ್ಕಾಗಿ ಗುಳೆ (ವಲಸೆ) ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಗಂಭೀರ ಸಂದರ್ಭದಲ್ಲಿ ಕೆಲವು ರಾಜಕೀಯ ಪಕ್ಷಗಳು, ಧಾರ್ಮಿಕ ಸಂಘಟನೆಗಳು ಪಾದಯಾತ್ರೆ, ಭಜನೆ, ಹರಕೆ, ವಿಶೇಷ ಪೂಜೆ, ಹೋಮ, ಹವನ ಮಾಡಿದರೆ ಮಳೆ ಬರುತ್ತದೆಂಬ ಅಂಧ–ನಂಬಿಕೆ ಪ್ರಚಾರ ಹೆಚ್ಚಾಗಿ ಮಾಡುತ್ತಿರುವುದು ಅತ್ಯಂತ ಖಂಡನೀಯವಾಗಿದೆ ಎಂದು ಸಿಪಿಐಎಂ–ಎಲ್ ರೆಡ್ ಸ್ಟಾರ್ ಪಕ್ಷದ ರಾಜ್ಯ ಕಾರ್ಯದರ್ಶಿ ಎಂ.ಗಂಗಾಧರ ಪತ್ರಿಕಾ ಪ್ರಕಟಣೆ ಹೊರಡಿಸಿದ್ದಾರೆ.

ಮಳೆ ಬೀಳುವುದು ಪ್ರಕೃತಿಯ ವೈಜ್ಞಾನಿಕ ಪ್ರಕ್ರಿಯೆಗಳಾದ ಮಾನ್ಸೂನ್ ಗಾಳಿಯ ಚಲನೆ, ಸಮುದ್ರದ ಉಷ್ಣತೆ, ವಾಯುಮಂಡಲದ ಒತ್ತಡದ ಬದಲಾವಣೆ, ಮೋಡಗಳ ರಚನೆ, "ಎಲ್–ನಿನೋ ಮ್ಯಾಡನ್?ಜೂಲಿಯನ್ ಆಸಿಲೇಶನ್" ಕಡಿಮೆ ಒತ್ತಡದ ವ್ಯವಸ್ಥೆಗಳು ಹಾಗೂ ಜಾಗತಿಕ ಹವಾಮಾನ ಬದಲಾವಣೆಗಳ ಮೇಲೆ ಅವಲಂಬಿತವಾಗಿದೆ. ಭಜನೆ, ಪಾದಯಾತ್ರೆ, ಯಾಗ, ಹರಕೆ ಅಥವಾ ಪೂಜೆಗಳಿಂದ ಮೋಡಗಳು ಸೃಷ್ಟಿಯಾಗುವುದಿಲ್ಲ ಮಳೆಯು ಕೂಡ ಸುರಿಯುವುದಿಲ್ಲ.

ಇಂದು ಮಳೆಯ ಅಸಮರ್ಪಕತೆ ಮತ್ತು ಬರದ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸುತ್ತಿರುವ ಪ್ರಮುಖ ಕಾರಣಗಳಲ್ಲಿ ಒಂದಾಗಿದೆ ಅಭಿವೃದ್ಧಿಯ ಹೆಸರಿನಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ನೈಸರ್ಗಿಕ ಸಂಪನ್ಮೂಲಗಳನ್ನು ಲೂಟಿ ಮಾಡಲು ಅವಕಾಶ ನೀಡುವುದು. ಅರಣ್ಯ ನಾಶ, ಬೆಟ್ಟಗುಡ್ಡಗಳ ಗಣಿಗಾರಿಕೆ, ಕೆರೆ–ಕೊಳಗಳ ಒತ್ತುವರಿ, ನದಿಗಳ ಮಾಲಿನ್ಯ, ಕೈಗಾರಿಕೆಗಳಿಂದ ಪರಿಸರ ಮಾಲಿನ್ಯ, ನಿಯಂತ್ರಣವಿಲ್ಲದ ನಗರೀಕರಣ ಜೀವವೈವಿಧ್ಯದ ನಾಶ, ಇವೆಲ್ಲವೂ ಪರಿಸರ ಸಮತೋಲನವನ್ನು ಹಾಳು ಮಾಡಿ ಮಳೆಯ ಮಾದರಿಗಳ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತಿವೆ. ಪರಿಸರ ಸಂರಕ್ಷಣೆಯನ್ನು ಕಡೆಗಣಿಸಿ ಲಾಭಕೇಂದ್ರೀಕೃತ ಅಭಿವೃದ್ಧಿ ಮಾದರಿ ಅನುಸರಿಸುವುದು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿಯೂ ಜನರ ಸಂಕಷ್ಟಗಳಿಗೆ ವೈಜ್ಞಾನಿಕ ಪರಿಹಾರ ನೀಡಬೇಕಾದ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳು ಅಂ–



ಧ ಶ್ರದ್ಧೆಯನ್ನು ಉತ್ತೇಜಿಸುವುದು ಸಂವಿಧಾನವು ಪ್ರತಿಪಾದಿಸುವ ವೈಜ್ಞಾನಿಕ ಮನೋಭಾವಕ್ಕೂ ವಿರುದ್ಧವಾಗಿದೆ. ಜನರ ಬದುಕಿನ ಪ್ರಶ್ನೆಗಳನ್ನು ಧಾರ್ಮಿಕ ಆಚರಣೆಗಳ ಮೂಲಕ ಪರಿಹರಿಸಬಹುದು ಎಂಬ ಭ್ರಮೆ ಮೂಡಿಸುವುದು ಜನರನ್ನು ದಾರಿ ತಪ್ಪಿಸುವ ರಾಜಕೀಯವಾಗಿದೆ.

ರಾಜ್ಯದ ಮಳೆ ಕೊರತೆಯಿರುವ ಪ್ರದೇಶಗಳನ್ನು ತಕ್ಷಣ ಬರಪೀಡಿತ ಪ್ರದೇಶಗಳೆಂದು ಘೋಷಿಸಬೇಕು. ಬರ ಪರಿಹಾರ ಕಾಮಗಾರಿಗಳನ್ನು ಕೂಡಲೇ ಆರಂಭಿಸಿ ಗ್ರಾಮೀಣ ಜನರಿಗೆ ವ್ಯಾಪಕ ಉದ್ಯೋಗ ಕಲ್ಪಿಸಬೇಕು. ಬೆಳೆ ನಷ್ಟಕ್ಕೊಳಗಾದ ಎಲ್ಲಾ ರೈತರಿಗೆ ಸಮಗ್ರ ಬೆಳೆ ಪರಿಹಾರವನ್ನು ತಕ್ಷಣ ವಿತರಿಸಬೇಕು. ಕೃಷಿ ಕೂಲಿ ಕಾರ್ಮಿಕರು, ಬಡವರು ಮತ್ತು ಗ್ರಾಮೀಣ ಜನರು ಗುಳೆ (ವಲಸೆ) ಹೋಗುವ ಪರಿಸ್ಥಿತಿ ಬರದಂತೆ ಉದ್ಯೋಗ, ಆಹಾರ, ಕುಡಿಯುವ ನೀರು ಹಾಗೂ ಅಗತ್ಯ ಜೀವನೋಪಾಯದ ಭದ್ರತೆ ಒದಗಿಸಬೇಕು.

ಭಾರತೀಯ ಹವಾಮಾನ ಇಲಾಖೆ ಮತ್ತು ಸಂಬಂಧಿತ ತಜ್ಞ ಸಂಸ್ಥೆಗಳ ಸಲಹೆಯ ಮೇರೆಗೆ, ಅನುಕೂಲಕರ ಹವಾಮಾನ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ವೈಜ್ಞಾನಿಕ ಆದಾರದ ಮೇಲೆ ಮೋಡ ಬಿತ್ತನೆಯ ಕಾರ್ಯಕ್ರಮವನ್ನು ತಕ್ಷಣ ಆರಂಭಿಸಲು ಮುಂದಾಗಬೇಕು. ಕೆರೆ, ಕಟ್ಟೆ, ಕಾಲುವೆಗಳ ಪುನರುಜ್ಜೀವನ, ಮಳೆನೀರು ಸಂಗ್ರಹಣೆ, ಭೂಗರ್ಭಜಲ ಮರುಪೂರಣ, ಅರಣ್ಯ ಸಂರಕ್ಷಣೆ ಹಾಗೂ ಪರಿಸರ ಪುನರುಜ್ಜೀವನ ಕಾರ್ಯಕ್ರಮಗಳನ್ನು ತುರ್ತಾಗಿ ಜಾರಿಗೊಳಿಸಬೇಕು.

ಪರಿಸರವನ್ನು ಹಾಳುಮಾಡುತ್ತಿರುವ ಕಾರ್ಪೊರೇಟ್ ಕಂಪನಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು, ಪರಿಸರ ಸಂರಕ್ಷಣಾ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಹವಾಮಾನ ಬದಲಾವಣೆಗೆ ಹೊಂದಿಕೊಂಡ ವೈಜ್ಞಾನಿಕ ಕೃಷಿ ನೀತಿಯನ್ನು ಜಾರಿಗೊಳಿಸಿ ರೈತರನ್ನು ರಕ್ಷಿಸಬೇಕು. ಜನರ ಬದುಕನ್ನು ಉಳಿಸುವುದು ಪಾದಯಾತ್ರೆ, ಭಜನೆ, ಹರಕೆ ಅಥವಾ ಪೂಜೆಗಳಿಂದಲ್ಲ; ವೈಜ್ಞಾನಿಕ ಯೋಜನೆಗಳು, ಪರಿಸರ ಸಂರಕ್ಷಣೆ, ಪ್ರಕೃತಿ ಸಂಪನ್ಮೂಲಗಳ ಜನಪರ ನಿರ್ವಹಣೆ ಮತ್ತು ಜನಪರ ಆಡಳಿತದಿಂದ ಮಾತ್ರ ಸಾಧ್ಯ.

ಅಂಧ–ನಂಬಿಕೆಗಳನ್ನು ರಾಜಕೀಯದ ಸಾಧನವನ್ನಾಗಿ ಬಳಸುವುದನ್ನು ನಿಲ್ಲಿಸಿ, ಬರದಿಂದ ತತ್ತರಿಸಿರುವ ರೈತರು ಮತ್ತು ದುಡಿಯುವ ಜನರ ಬದುಕನ್ನು ರಕ್ಷಿಸಲು ತಕ್ಷಣದ ಕ್ರಮ ಕೈಗೊಳ್ಳಬೇಕು ಸಿಪಿಐಎಂಎಲ್ ರೆಡ್ ಸ್ಟಾರ್ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯದ ರೈತರು, ಕೃಷಿ ಕೂಲಿ ಕಾರ್ಮಿಕರು, ಯುವಜನತೆ, ಮಹಿಳೆಯರು ಹಾಗೂ ಎಲ್ಲಾ ಪ್ರಗತಿಪರ ನಾಗರಿಕರಿಗೆ ಕರೆ ನೀಡುತ್ತದೆ, ಅಂಧ–ನಂಬಿಕೆಗಳನ್ನು ತಿರಸ್ಕರಿಸಿ, ವೈಜ್ಞಾನಿಕ ಚಿಂತನೆ ಅಳವಡಿಸಿಕೊಳ್ಳಿ ಪ್ರಕೃತಿ ಮತ್ತು ಪರಿಸರವನ್ನು ಕಾರ್ಪೊರೇಟ್ ಲೂಟಿಯಿಂದ ರಕ್ಷಿಸಿ, ಜನರ ಬದುಕು ಮತ್ತು ಜೀವನೋಪಾಯವನ್ನು ಉಳಿಸುವ ಹೋರಾಟವನ್ನು ಬಲಪಡಿಸೋಣ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಯಾವುದೇ ವಿಳಂಬ ಮಾಡದೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐಎಂಎಲ್ ರೆಡ್ ಸ್ಟಾರ್ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸುತ್ತದೆ ಎಂದರು.

## ನೇಮಕಾತಿ ಪ್ರಕಟಣೆ

**ಕರ್ನಾಟಕ ಲೋಕಾಯುಕ್ತ ನೇಮಕಾತಿ 2026 ? 25 ಕ್ಲರ್ಕ್ ಮತ್ತು ಟೈಪಿಸ್ಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 15 ಜುಲೈ 2026**

ಕರ್ನಾಟಕ ಲೋಕಾಯುಕ್ತ ನೇಮಕಾತಿ 2026: 25 ಕ್ಲರ್ಕ್ ಮತ್ತು ಟೈಪಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜುಲೈ 2026ರ ಅಧಿಕೃತ ಅಧಿಸೂಚನೆಯ ಮೂಲಕ ಕ್ಲರ್ಕ್ ಮತ್ತು ಟೈಪಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಾಯುಕ್ತವು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ಕರ್ನಾಟಕ ಸರ್ಕಾರದ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 17-ಆಗಸ್ಟ್-2026 ರೊಳಗೆ ಅಥವಾ ಅಂದು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: lokayukta.karnataka.gov.in

## ಮತದಾರರ ಪಟ್ಟಿ ಪರಿಷ್ಕರಣೆ ಅತ್ಯಮೂಲ್ಯ - ಹನುಮಂತಪ್ಪ ಹರವಿ

ನೈಜ್ಯ ದೆಸೆ ನ್ಯೂಸ್

ಮಾನ್ವಿ : ಪಟ್ಟಣದ ಕಲ್ಮಠ ಪದವಿ ಮಹಾವಿದ್ಯಾಲಯದ ವತಿಯಿಂದ ಇಂದು "ಮತದಾರರ ಪಟ್ಟಿ ಪರಿಷ್ಕರಣೆ ಜಾಥಾ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಹನುಮಂತಪ್ಪ ಹರವಿ ಮಾತನಾಡಿ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ಅತ್ಯಂತ ಮಹತ್ವದ್ದಾಗಿದೆ. ಎಲ್ಲಾ ಪದವಿ ವಿದ್ಯಾರ್ಥಿಗಳು ಹಾಗೂ ಮನೆಯಲ್ಲಿರುವ ಎಲ್ಲಾ ಮತದಾರರಿಗೆ, ಪಕ್ಕದ ಮನೆಯವರಿಗೆ ಮತ್ತು ಊರಿನ ಜನರಿಗೆ ಮತದಾರರ ಪಟ್ಟಿ ಪರಿಷ್ಕರಣೆ ವ್ಯವಸ್ಥೆಯ ಮಹತ್ವವನ್ನು ತಿಳಿಸಬೇಕು" ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ




ಕಾಲೇಜಿನ ಪ್ರಾಚಾರ್ಯರಾದ ಸಿದ್ದನಗೌಡ ಪಾಟೀಲ್ ಮಾತನಾಡಿ, ಮಾನ್ಯ ತಹಶೀಲ್ದಾರ್ ಮಾನ್ವಿ ಅವರ ಆದೇಶದನ್ವಯ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮನೆಯಲ್ಲಿರುವ ಇಕಖಅ ನಂಬರ್ ಗಳನ್ನು ತೆಗೆದುಕೊಂಡು ಬಂದು ನಮಗೆ ನೀಡಬೇಕು. ಸಂಗ್ರಹಿಸಿದ ಮಾಹಿತಿಯನ್ನು ತಹಶೀಲ್ದಾರ್ ಕಚೇರಿ, ಮಾನ್ವಿಗೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮಾಧಿಕಾರಿ ಆನಂದ, ಉಪನ್ಯಾಸಕರಾದ ರಾಘವೇಂದ್ರ ಉಪನ್ಯಾಸಕಿ ಶರಣಮ್ಮಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸುಷ್ಮಾ ನಿರೂಪಿಸಿದರು.ಪ್ರಾರ್ಥನೆ ಗೀತೆಯನ್ನು ಶ್ರೀದೇವಿ ಹಾಗೂ ಸಂಗಡಿಗರು ಹಾಡಿದರು ಕಾಜಾ ಹುಸೇನ್ ವಂದಿಸಿದರು. ಕಾರ್ಯಕ್ರಮದ ನಂತರ ಕಾಲೇಜಿನಿಂದ ಮತದಾರರ ಪಟ್ಟಿ ಪರಿಷ್ಕರಣೆ ಜಾಥಾವನ್ನು ಹಮ್ಮಿಕೊಳ್ಳಲಾಯಿತು. ಜಾಥಾದಲ್ಲಿ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದರು.

## ತಿಪ್ಪಣ್ಣಪ್ಪ ಕಮಕನೂರ್‌ಗೆ ಸಚಿವ ಸ್ಥಾನ ನೀಡುವಂತೆ ಅಧ್ಯಕ್ಷ ಎಂ.ವಿರೇಶ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕಾಂಗ್ರೆಸ್ ಹೈಕಮಾಂಡ್ ಮತ್ತು ನೂತನ ಸಿಎಂ ಇವರು ಸತತ ಮೂರು ಬಾರಿ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿರುವ ಗಂಗಾಮತ ಸಮಾಜದ ತಿಪ್ಪಣ್ಣಪ್ಪ ಕಮಕನೂರು ಇವರಿಗೆ ಸಚಿವ ಸ್ಥಾನ ನೀಡಬೇಕೆಂದು ಮಣ್ಣೂರು ಸುಗೂರು ಗ್ರಾಮದ ಗಂಗಾಪರಮೇಶ್ವರಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಎಂ.ವೀರೇಶ ಒತ್ತಾಯಿಸಿದರು.**



ಅವರು ಮಣ್ಣೂರು ಸುಗೂರು ಗ್ರಾಮದಲ್ಲಿ ಗಂಗಾ ಪರಮೇಶ್ವರಿ ದೇವಸ್ಥಾನದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿ, ಮಣ್ಣೂರು ಸುಗೂರು ಸಿರುಗಪ್ಪ ಸೇರಿದಂತೆ ರಾಜ್ಯದಲ್ಲಿ ಸುಮಾರು 40 ರಿಂದ 50 ಲಕ್ಷಕ್ಕೂ ಹೆಚ್ಚು ಗಂಗಾಮತ(ಬೆಸ್ತರ) ಜನಸಂಖ್ಯೆ ಇದ್ದಾರೆ. ಈ ಸಮಾಜವು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದೆ. ಇಂದಿಗೂ ತಳಮಟ್ಟದಲ್ಲಿರುವ ಈ ಬಲಿಷ್ಠ ಸಮಾಜವು ಪ್ರಗತಿಯ ಪಥದತ್ತ ಮುನ್ನುಗ್ಗಲು, ಸಮಾಜದ ಧ್ವನಿಯಾಗಿ ರಾಜ್ಯ ಮಟ್ಟದಲ್ಲಿ ಕೆಲಸ ನಿರ್ವಹಿಸಲು ರಾಜಕೀಯ ಚತುರನ ಅವಶ್ಯಕತೆ ಇದೆ. ಆದ್ದರಿಂದ ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರುಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಗಂಗಾಮತ ಸಮಾಜದ ಮುಖಂಡರು ದೊಡ್ಡಬಸಪ್ಪ ಬಾರಿಕೇರ ಮಲ್ಲಿಕಾರ್ಜುನ ತಿಪ್ಪೇಶಿ ಕೆ ಶಿವಕಮಾರ ಸೇರಿದಂತೆ ಅನೇಕರಿದ್ದರು.

## ಮುದಗಲ್‌ನಲ್ಲಿ ವಿದ್ಯಾರ್ಥಿಗಳಿಗೆ ಸಂಚಾರ ನಿಯಮ, ಹೆಲ್ಮೆಟ್ ಕಡ್ಡಾಯ, ಪೋಕ್ಸೋ, ಡ್ರಗ್ಸ್ ಹಾಗೂ ಸೈಬರ್ ಅಪರಾಧ ಕುರಿತು ಜಾಗೃತಿ



ನೈಜ್ಯ ದೆಸೆ ನ್ಯೂಸ್

**ಮುದಗಲ್: ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು, ಸಾಮಾಜಿಕ ಜವಾಬ್ದಾರಿ ಮತ್ತು ರಸ್ತೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಮುದಗಲ್ ಪೊಲೀಸ್ ಠಾಣೆ ವತಿಯಿಂದ ಮುದಗಲ್ ಪಟ್ಟಣದ ಎಂ. ಗಂಗಣ್ಣ ಸ್ಮಾರಕ ಪದವಿ ಪೂರ್ವ ಕಾಲೇಜಿನಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುದಗಲ್ ಪೊಲೀಸ್ ಠಾಣೆಯ ಪಿ.ಎಸ್.ಐ. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ದ್ವಿಚಕ್ರ ವಾಹನ ಚಾಲನೆ ಮಾಡುವಾಗ ಚಾಲಕ ಹಾಗೂ ಹಿಂಬದಿ ಸವಾರ ಇಬ್ಬರೂ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಎಂದು ತಿಳಿಸಿದರು. ಸಂಚಾರ ನಿಯಮಗಳನ್ನು ಪಾಲಿಸುವುದರಿಂದ ಅಪಘಾತಗಳನ್ನು ತಡೆಯಬಹುದಾಗಿದ್ದು, ಜೀವ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಬಳಿಕ ಬಾಲ್ಯವಿವಾಹ ನಿಷೇಧ ಕಾಯ್ದೆ ಕುರಿತು ಮಾಹಿತಿ ನೀಡಿ, ಬಾಲ್ಯವಿವಾಹವು ಕಾನೂನುಬಾಹಿರವಾಗಿದ್ದು, ಇದರಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು. ಪೋಕ್ಸೋ (POCSO) ಕಾಯ್ದೆ ಕುರಿತು ಮಾತನಾಡಿದ ಅವರು, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ, ಕಿರುಕುಳ ಹಾಗೂ ಶೋಷಣೆಯನ್ನು ತಡೆಯಲು ಈ ಕಾಯ್ದೆ ಜಾರಿಯಲ್ಲಿದ್ದು, ಯಾವುದೇ ರೀತಿಯ ಕಿರುಕುಳ ಕಂಡುಬಂದರೆ ತಕ್ಷಣ ಪೋಷಕರು, ಶಿಕ್ಷಕರು ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಡ್ರಗ್ಸ್ ಹಾಗೂ ಎನ್.ಡಿ.ಪಿ.ಎಸ್. ಕಾಯ್ದೆ ಕುರಿತು ಅರಿವು ಮೂಡಿಸಿದ ಅವರು, ಮಾದಕ ವಸ್ತುಗಳ ಸೇವನೆ ಯುವಜನರ ಭವಿಷ್ಯವನ್ನು ಹಾಳು ಮಾಡುವುದಲ್ಲದೆ, ಸಮಾಜದ ಶಾಂತಿ ಮತ್ತು ಆರೋಗ್ಯಕ್ಕೂ ಅಪಾಯಕಾರಿಯಾಗಿದೆ ಎಂದು ತಿಳಿಸಿದರು. ಯಾವುದೇ ವ್ಯಕ್ತಿ ಮಾದಕ ವಸ್ತುಗಳ ಮಾರಾಟ ಅಥವಾ ಬಳಕೆಯಲ್ಲಿ ತೊಡಗಿದ್ದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಮನವಿ ಮಾಡಿದರು. ಇದೇ ವೇಳೆ ಸೈಬರ್ ಅಪರಾಧಗಳ ಕುರಿತು ಮಾತನಾಡಿ, ಅಪರಿಚಿತ ಲಿಂಕ್‌ಗಳನ್ನು ತೆರೆಯದಿರುವುದು, ಒಟಿಪಿ, ಬ್ಯಾಂಕ್ ಖಾತೆ, ಎಟಿಎಂ ಪಿನ್ ಹಾಗೂ ವೈಯಕ್ತಿಕ ಮಾಹಿತಿಯನ್ನು ಯಾರೊಂದಿಗೂ ಹಂಚಿಕೊಳ್ಳದಿರುವುದು, ಸಾಮಾಜಿಕ ಜಾಲತಾಣಗಳನ್ನು ಜವಾಬ್ದಾರಿಯಿಂದ ಬಳಸುವುದು ಹಾಗೂ ಯಾವುದೇ ಆನ್‌ಲೈನ್ ವಂಚನೆ ಸಂಭವಿಸಿದರೆ ತಕ್ಷಣ 1930 ಸೈಬರ್ ಸಹಾಯವಾಣಿ ಅಥವಾ ಸಮೀಪದ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಸಲಹೆ ನೀಡಿದರು.

ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ಕಾನೂನುಗಳನ್ನು ಗೌರವಿಸಿ, ಶಿಸ್ತು, ಸಂಯಮ ಮತ್ತು ಸಾಮಾಜಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಸುರಕ್ಷಿತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಪೊಲೀಸ್ ಸಿಬ್ಬಂದಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಜಾಗೃತಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

## ನಾಯಿಗಳ ದಾಳಿಗೆ ಒಂದುವರೆ ವರ್ಷದ ಮಗು ಬಲಿ ಗುರುವಾರ ಹಂಚಿನಾಳ ಕ್ಯಾಂಪಿಗೆ ವೈದ್ಯರ ತಂಡ ಭೇಟಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಒಂದುವರೆ ವರ್ಷದ ಮಗುವಿನ ಮೇಲೆ ನಾಯಿಗಳು ದಾಳಿ ಮಾಡಿದ್ದರಿಂದ ಹೆಣ್ಣು ಮಗು ಸಾವನ್ನಪ್ಪಿದ ಘಟನೆ ಹಂಚಿನಾಳ ಕ್ಯಾಂಪಿನಲ್ಲಿ ಬುಧವಾರ ಬೆಳಗಿನ ಜಾವದಲ್ಲಿ ನಡೆದಿದೆ.**



ಹೊಸಪೇಟೆ ಅಬ್ದುಲ್ ರಜಾಕ್ ಕುಟುಂಬ ಹಂಚಿನಾಳ ಕ್ಯಾಂಪಿನಲ್ಲಿರುವ ತಮ್ಮ ಸಂಬಂಧಿ ಮನೆಯಲ್ಲಿ ಮಲಗಿ ಮುಂಜಾನೆ ಹೊಸಪೇಟೆಗೆ ಹೋಗಲು ತೀರ್ಮಾನ ಮಾಡಿ ಮಂಗಳವಾರ ರಾತ್ರಿ ಮನೆಯಲ್ಲಿ ಮಲಗಿದ್ದು, ಬುಧವಾರ ಬೆಳಿಗಿನ ಜಾವ 3 ಗಂಟೆ ಸುಮಾರಿಗೆ ಸೀರೆ ತೊಟ್ಟಿಲನಿಂದ ಇಳಿದು ಅಳುತ್ತಾ ಅಂಬೆಗಾಲಿನಲ್ಲಿ ಮಗು ಹೊರಗೆ ಬಂದಿದೆ. ಸುಮಾರು ಏಳೆಂಟು ಬೀದಿ ನಾಯಿಗಳು ಎಳೆದಾಡಿ ಕಚ್ಚಿ ಕಚ್ಚಿ ದಾಳಿ ಮಾಡಿ ಹಸುಗೂಸು ಮಗು ಸಾವಿಗೆ ಕಾರಣವಾಗಿವೆ. ಮಗು ಮಲಗಿದೆ ಎಂದು ಪಾಲಕರು ತಿಳಿದುಕೊಂಡಿದ್ದೆ ತಪ್ಪಾಗಿದೆ. ಮನೆ ಮುಂದೆ ನಾಯಿಗಳ ಹಿಂಡು ನಿಂತಿದ್ದು ನೋಡಿ, ಸಾರ್ವಜನಿಕರು ಮನೆಯವರಿಗೆ ಹೇಳಿದ ಮೇಲೆಯೇ ಕುಟುಂಬಸ್ಥರು ಹೊರಗೆ ಬಂದು ನೋಡಿದಾಗ ತಮ್ಮ ಮಗು ಸಾವನ್ನಪ್ಪಿದ ಬಗ್ಗೆ ತಿಳಿದು ಬಂದಿದೆ. ಒಂದುವರೆ ವರ್ಷದ ಅನಂ ತಂದೆ ಅಬ್ದಲ್ ರಜಾಕ್ ತಾಯಿ ನಧಾಪ್ ಎಂದು ತಿಳಿದು ಬಂದಿದೆ. ನಾಯಿಗಳ ದಾಳಿಗೆ ಮಗ ಬಲಿಯಾದ ವಿಷಯ ತಿಳಿದು ಗುರುವಾರ ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ.ಅಯ್ಯನಗೌಡ ನೇತೃತ್ವದ ಸಿಬ್ಬಂದಿಗಳ ತಂಡ ಹಂಚಿನಾಳ ಕ್ಯಾಂಪಿಗೆ ಹೋಗಿ ಕುಟುಂಬಸ್ಥರಿಂದ ಮಾಹಿತಿ ಪಡೆದುಕೊಂಡು ಮೇಲಾಧಿಕಾರಿಗಳಿಗೆ ವರದಿ ನೀಡಲಾಗುವುದು ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ.ಅಯ್ಯನಗೌಡ ಪತ್ರಿಕೆಗೆ ಮಾಹಿತಿ ನೀಡಿದರು. ನಾಯಿಗಳನ್ನು ಹಂಚಿನಾಳ ಕ್ಯಾಂಪಿನಿಂದ ಸ್ಥಳಾಂತರ ಮಾಡಬೇಕು ಹಾಗೂ ನಾಯಿಗಳಿಗೆ ರೇಬೀಸ್ ಇಂಜಕ್ಷನ್ ನೀಡುವಂತೆ ಗ್ರಾಮ ಪಂಚಾಯತಿ ಪಿಡಿಒ ಅವರಿಗೆ ಸೂಚನೆ ನೀಡಲಾಗಿದೆ ಎಂದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸಂಗನಗೌಡ ಪಾಟೀಲ್, ಸಾಂಕ್ರಾಮಿಕ ರೋಗಗಳ ವೈದ್ಯ ನಿಖಿಲ್, ತಾಲೂಕು ವಿಬಿಡಿ ಎಫ್.ಎ.ಹಣಗಿ, ಸಮುದಾಯ ಆರೋಗ್ಯ ಕೇಂದ್ರ ಸುಮಾ ಪಾಟೀಲ್, ಪದ್ಮಾವತಿ, ಸೇರಿದಂತೆ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದರು.

## ಭೂ ಸಂತ್ರಸ್ತರಿಗೆ ನ್ಯಾಯ ಕೊಡಿಸುವಂತೆ ಬಿ.ವೈ.ವಿಜಯೇಂದ್ರಗೆ ಸಂತ್ರಸ್ತರ ಮನವಿಯ ಅಳಲು

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಕುಡತಿನಿ ಭೂ ಸಂತ್ರಸ್ತರು ಕಳೆದ ಎರಡ್ಮೂರು ವರ್ಷದಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ನಡೆಸುತ್ತಾ ಬಂದಿದ್ದು, ಇಲ್ಲಿನ ಭೂ ಸಂತ್ರಸ್ತರ ಹೋರಾಟವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಕಡೆಗಣಿಸಿರುವುದು ವಿಪರ್ಯಾಸವಾಗಿದೆ. ನ್ಯಾಯ ದೊರಕುವರೆಗೂ ಹೋರಾಟ ಅತಿಮುಖ್ಯವಾಗಿದೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.**

ಬಳ್ಳಾರಿ ನಗರದಲ್ಲಿ ನಡೆದ ಬಿಜೆಪಿಯ ಎಸ್‌ಐಆರ್ ಮತದಾರರ ಪಟ್ಟಿ ಪರಿಷ್ಕರಣೆಯ ವಿಶೇಷ ಸಭೆಯಲ್ಲಿ ಪಾಲ್ಗೊಂಡ ನಂತರ ಕುಡತಿನಿ ಮಾರ್ಗವಾಗಿ ಹೊಸಪೇಟೆಗೆ ತೆರಳುವ ಮಾರ್ಗ ಮಧ್ಯದ ಕುಡತಿನಿಯ ಬೈಪಾಸ್ ರಸ್ತೆಯಲ್ಲಿ ಭೂ ಸಂತ್ರಸ್ತರ ಹೋರಾಟ ಅವರ ಕಾರು ನಿಲ್ಲಿಸಿ, ಲಕ್ಷ್ಮೀ ಮಿತ್ತಲ್‌ಗೆ ನೀಡಿದ್ದ ರೈತರ ಸಾಕಷ್ಟು ಜಮೀನನ್ನು ಸರ್ಕಾರ ಮುಖೇನ ಕೆಐಎಡಿಬಿ ಮೂಲಕ ಜಿಂದಲ್‌ಗೆ ಭೂಮಿ ಪರಭಾರೆ ಮಾಡಿದೆ.

ಇದರಿಂದ ಇಲ್ಲಿನ ಭೂ ಸಂತ್ರಸ್ತರಿಗೆ ಅನ್ಯಾಯವಾಗಿದೆ ಎಂಬ ಅಳಲನ್ನು ತೋಡಿಕೊಂಡ ನಂತರ ರೈತರಿಗೆ ಭೂಬೆಲೆಯಲ್ಲಿ ವಂಚಿಸಿದ್ದು,



ನಮಗೆ ನ್ಯಾಯ ಕೊಡಿಸಬೇಕೆಂದು ನೀಡಿದ ಮನವಿ ಪತ್ರ ಸ್ವೀಕರಿಸಿ ಮಾತನಾಡಿ, ಕುಡತಿನಿ ಭಾಗದ ರೈತರಿಗೆ ಸಾಕಷ್ಟು ಅನ್ಯಾಯವಾಗುತ್ತಿದ್ದರೂ ಸರ್ಕಾರ ಮಾತ್ರ ಕಿವುಡರಂತೆ ವರ್ತಿಸುತ್ತಿದೆ. ಈಗಾಗಲೇ ರೈತರು ಸೇರಿದಂತೆ ಜನ ಸಾಮಾನ್ಯರು ಜನ ವಿರೋಧ ಸರ್ಕಾರದ ವಿರುದ್ಧ ಆಕ್ರೋಶಿತರಾಗಿದ್ದಾರೆ.

ಇಲ್ಲಿನ ರೈತರಿಗೆ ನ್ಯಾಯ ಕೊಡಿಸುವುದು ನಮ್ಮ ಧ್ಯೇಯವಾಗಿದೆ. ಸರ್ಕಾರದ ಮಟ್ಟದಲ್ಲಿ ಧ್ವನಿ ಎತ್ತಿ, ರೈತರ ಬೇಡಿಕೆ ಈಡೇರಿಸಲಾಗುವುದು ಎಂದರು. ನಂತರ ಭೂ ಸಂತ್ರಸ್ತ ಹೋರಾಟಗಾರರು ಮಾತನಾಡಿ, ಕಳೆದ ಹನ್ನೆರಡು ವರ್ಷದ ಹಿಂದೆ ಕುಡತಿನಿ ಪ್ರದೇಶದಲ್ಲಿ ಮೂರು ಬೃಹತ್ ಕೈಗಾರಿಗಳ ಸ್ಥಾಪನೆಯ ಉದ್ದೇಶದಿಂದ ಸರ್ಕಾರ ಕೆಐಎಡಿಬಿ ಮೂಲಕ 12 ವರೆ ಸಾವಿರ ಎಕರೆ ಜಮೀನನ್ನು ಏಳು ಗ್ರಾಮಗಳ ರೈತರರಿಂದ ಬಲವಂತವಾಗಿ ಸ್ವಾಧೀನಪಡಿಸಿಕೊಂಡಿದೆ. ಮೋಸದ ಭೂ ಬೆಲೆಗೆ ಪಡೆದಿದೆ. ಅಂದಿನಿಂದ ಇಲ್ಲಿತನಕ ನಿರಂತರವಾಗಿ ಧರಣಿ ಸತ್ಯಾಗ್ರಹ ಮಾಡಿಕೊಂಡು ಬರಲಾಗಿದೆ. ಸರ್ಕಾರ ಇದ್ದರೂ ಇಲ್ಲದಂತಾಗಿದೆ.

ನಮಗೆ ನ್ಯಾಯ ಕೊಡಿಸಿ. 2010ರಲ್ಲಿ ಕೆಐಎಡಿಬಿಯವರು ಆರ್ಸೆಲರ್ ಮಿತ್ತಲ್‌ಗಾಗಿ 5300 ಎಕರೆ ನೋಟಿಫಿಕೇಷನ್ ಆದ ಜಮೀನುಗಳನ್ನು ಅರ್ಸೆಲರ್ ಮಿತ್ತಲ್ ಕಂಪನಿಯವರು 15 ವರ್ಷವಾದರೂ ಕಾರ್ಖಾನೆ ಸ್ಥಾಪಿಸಿಲ್ಲ. ಸದರಿ ಕಂಪನಿಯವರು ಜಮೀನುಗಳನ್ನು ವಾಪಸ್ಸು ಬಿಟ್ಟಿರುತ್ತಾರೆ. ಇದೇ ಜಮೀನುಗಳಲ್ಲಿ ಕೆಐಎಡಿಬಿಯವರು ಅಕ್ರಮವಾಗಿ ಜಿಂದಾಲ್ ಕಂಪನಿಗೆ ಮಾರಾಟ ಮಾಡಿದ್ದು, ಅಲ್ಲದೇ ಸುಮಾರು 4 ವರ್ಷಗಳಿಂದ ಹೋರಾಟ ಮಾಡುತ್ತಿರುವ ರೈತರಿಗೆ ಕೇಸು ಹಾಕಿಸುವುದು ಸದರಿ ಕಂಪನಿಯವರು ಹಾಗೂ ಕೆಐಎಡಿಬಿಯವರು ಸೇರಿ ಕಾನೂನು ಬಾಹಿರ ಹಾಗು ದೌರ್ಜನ್ಯಕ್ಕೆ ಮುಂದಾಗಿದ್ದಾರೆ. ಕೂಡಲೇ ಜಿಂದಲ್ ಕಂಪನಿಯವರು ಕಾರ್ಖಾನೆ ಹಾಕಿಸುವುದನ್ನು ನಿಲ್ಲಿಸಲು, ರೈತರಿಗೆ ಸಹಕಾರ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಬಿ.ಶ್ರೀರಾಮುಲು, ಭೂ ಸಂತ್ರಸ್ತರಾದ ಹಡಪದ ರಮೇಶ, ಹೋಳಿಗೆ ಸಿದ್ದಪ್ಪ ವಿ.ತಿಮ್ಮಪ್ಪ, ರುದ್ರಪ್ಪ, ಎಲ್ಲಪ್ಪ, ನಾಗಪ್ಪ, ಹನುಮಂತಪ್ಪ, ಬಡಿಯಾರು ಹುಚ್ಚಪ್ಪ, ವಿ.ನಾರಾಯಣಪ್ಪ, ಪಂಪಾಪತಿ, ಕೆಂಚಪ್ಪ, ಗಂಗಮ್ಮ, ಮಲ್ಲಮ್ಮ, ಸುಂಕಮ್ಮ ಸೇರಿದಂತೆ ಭೂ ಸಂತ್ರಸ್ತರ ಹೋರಾಟಗಾರರು ಇದ್ದರು.

## ಮುಕ್ಕನಾಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೂಲಭೂತ ಸೌಕರ್ಯ ಕಲ್ಪಿಸಲು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಜಿಲ್ಲಾ ಸಮಿತಿಯ ವತಿಯಿಂದ ಮುಕ್ಕನಾಳ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ತಕ್ಷಣವೇ ಕಲ್ಪಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.**

ಸಂಘಟನೆಯ ಮುಖಂಡರು ಮಾತನಾಡಿ, ಶಾಲೆಯಲ್ಲಿ ಸುಮಾರು 250 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲದಿರುವುದು




ಹಾಗೂ ಶಾಲೆಯ ಕೊಠಡಿಗಳ ಮೇಲ್ಛಾವಣಿ ಕುಸಿದು ಬೀಳುವ ಸ್ಥಿತಿಯಲ್ಲಿರುವುದು ವಿದ್ಯಾರ್ಥಿಗಳ ಸುರಕ್ಷತೆಗೆ ಗಂಭೀರ ಅಪಾಯ ಉಂಟುಮಾಡಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದಲ್ಲದೆ, ಶಾಲೆಯ ಸುತ್ತಮುತ್ತ ಜಾಲಿಗಿಡಗಳು ಬೆಳೆದು ಪರಿಸರ ಹಾಳಾಗಿದ್ದು, ವಿಷಜಂತುಗಳು ಶಾಲೆಯೊಳಗೆ ಪ್ರವೇಶಿಸುವ ಭೀತಿ ಎದುರಾಗಿದೆ. ಈ ಕುರಿತು ಈ ಹಿಂದೆ ಮನವಿ ಸಲ್ಲಿಸಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಆದ್ದರಿಂದ, ಮುಕ್ಕನಾಳ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥ-'ಮಿಕ ಶಾಲೆಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸಬೇಕು. ಇಲ್ಲವಾದಲ್ಲಿ ತಾಲೂಕು ಕಾರ್ಯಾಲಯದ ಎದುರು ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಜಿಲ್ಲಾ ಸಮಿತಿ ಎಚ್ಚರಿಕೆ ನೀಡಿದೆ.

ಈ ಸಂದರ್ಭದಲ್ಲಿ ರಾಯಚೂರು ಜಿಲ್ಲಾ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್, ಜಿಲ್ಲಾ ಸಂಚಾಲಕ ಕ್ರಾಂತಿಕುಮಾರ್ ರಾಯಚೂರಕರ್, ತಾಲೂಕು ಅಧ್ಯಕ್ಷ ಮಹಾದೇವ ಯಾದವ್, ದೇವಪ್ಪ ಬಂಡಿ, ಗ್ರಾಮ ಘಟಕದ ಅಧ್ಯಕ್ಷ ಶಿವಪ್ಪ ಬಿಜಾಸ್ಪೂರ, ಸದಸ್ಯರಾದ ನಾಗಪ್ಪ ಪೂಜಾರಿ, ದೇವೇಂದ್ರಪ್ಪ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಜಾಲಹಳ್ಳಿ ಗ್ರಾಮ ಪಂಚಾಯಿತಿಗೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಹನುಮಂತಿ ಶಿವಬಸಪ್ಪ ರಾಮ್ ಪಾಳಿ ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಸಿಪಿಎಂ ಬೆಂಬಲಿತ ಅಭ್ಯರ್ಥಿ ಹನುಮಂತಿ ಶಿವಬಸಪ್ಪ ರಾಮ್ ಪಾಳಿ ಅವರು ಭರ್ಜರಿ ಜಯ ಸಾಧಿಸಿದ್ದಾರೆ.**

ಚುನಾವಣಾಧಿಕಾರಿಯಾಗಿದ್ದ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಜೇಂದ್ರ ಕುಮಾರ್ ಅವರು ಫಲಿತಾಂಶವನ್ನು ಪ್ರಕಟಿಸಿದರು. ಹನುಮಂತಿ ಶಿವಬಸಪ್ಪ ರಾಮ್ ಪಾಳಿ ಅವರು 18 ಮತಗಳನ್ನು ಪಡೆದು ವಿಜಯಶಾಲಿಯಾದರೆ, ಪ್ರತಿಸ್ಪರ್ಧಿ ರೇವತಿ ಶಂಕರಗೌಡ ಮಾಲಿ ಪಾಟೀಲ್ ಅವರು 15 ಮತಗಳನ್ನು ಪಡೆದು ಪರಾಭವಗೊಂಡರು.

ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಹಾಗೂ ಸಿಪಿಎಂ ಪಕ್ಷದ ನೂರಾರು ಕಾರ್ಯಕರ್ತರು ಜಾಲಹಳ್ಳಿಯಲ್ಲಿ ವಿಜಯೋತ್ಸವ ಆಚರಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಮುಖಂಡರ ಪ್ರತಿಕ್ರಿಯೆಗಳು ಬಸವರಾಜ್ ಪಂಪಾಪತಿ (ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು): ವಿ"ನೂತನ ಅಧ್ಯಕ್ಷರ ಆಯ್ಕೆಗೆ ಕಾರಣ-



ಕರ್ತರಾದ ಎಲ್ಲಾ ಗ್ರಾಮ ಪಂಚಾಯತ್ ಸದಸ್ಯರಿಗೆ ಹಾಗೂ ಬೆಂಬಲ ನೀಡಿದ ಸಿಪಿಎಂ ಪಕ್ಷದ ಸದಸ್ಯರು ಮತ್ತು ಮುಖಂಡರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು."ಹಿ ತಿಮ್ಮಣ್ಣ ನಾಯಕ್ ದೀವಾನ್ (ಕಾಂಗ್ರೆಸ್ ಮುಖಂಡ ಹಾಗೂ ಗ್ರಾ.ಪಂ. ಸದಸ್ಯ): ವಿ"ಕಾಂಗ್ರೆಸ್ ಮತ್ತು ಸಿಪಿಎಂ ಮೈತ್ರಿ ಬೆಂಬಲದೊಂದಿಗೆ ನಮ್ಮ ಅಭ್ಯರ್ಥಿ ಹನುಮಂತಿ ಶಿವಬಸಪ್ಪ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಂತಸದ ವಿಷಯ.

ಜಾಲಹಳ್ಳಿಯ ಸರ್ವಾಂಗೀಣ ಅಭಿವೃದ್ಧಿಗೆ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುತ್ತೇವೆ."ಹಿ ಅಯ್ಯಪ್ಪ ತಾತ (ಕಾಂಗ್ರೆಸ್ ಮುಖಂಡ ಹಾಗೂ ಗ್ರಾ.ಪಂ. ಸದಸ್ಯ): ವಿ"ಸಿಪಿಎಂ ಬೆಂಬಲದೊಂದಿಗೆ ಐತಿಹಾಸಿಕ ಜಯ ದೊರೆತಿದೆ. ನೂತನ ಅಧ್ಯಕ್ಷರ ನೇತೃತ್ವದಲ್ಲಿ ಜಾಲಹಳ್ಳಿಯಲ್ಲಿ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು."ಹಿ ಹೈದರ್ ಸಾಬ್ ಮುಲ್ಲಾ (ಕಾಂಗ್ರೆಸ್ ಮುಖಂಡ): ವಿ"ಈ ಗೆಲುವು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಹೊಸ ಚೈತನ್ಯ ತುಂಬಿದೆ. ಗ್ರಾಮದ ಅಭಿವೃದ್ಧಿಯೇ ನಮ್ಮ ಮೊದಲ ಆದ್ಯತೆ."ಹಿ ರಂಗಪ್ಪ ತೊಗರಿ (ಕಾಂಗ್ರೆಸ್ ಮುಖಂಡ): ವಿ"ನಮ್ಮ ಬೆಂಬಲಿತ ಅಭ್ಯರ್ಥಿಯ ಗೆಲುವಿಗೆ ಸಹಕರಿಸಿದ ಪ್ರತಿಯೊಬ್ಬರಿಗೂ ಹೃದಯಪೂರ್ವಕ ಧನ್ಯವಾದಗಳು.

"ಹಿ ಮಲ್ಲಪ್ಪ ಸೌದ್ರಿ (ಗ್ರಾಮ ಪಂಚಾಯತ್ ಸದಸ್ಯ): ವಿ"ಮಹಿಳಾ ಸದಸ್ಯರ ಒಗ್ಗಟ್ಟು ಮತ್ತು ಬೆಂಬಲದಿಂದ ನೂತನ ಅಧ್ಯಕ್ಷರನ್ನು ಯಶಸ್ವಿಯಾಗಿ ಆಯ್ಕೆ ಮಾಡಲಾಗಿದೆ."ಹಿ ಪತ್ರಕರ್ತರೊಂದಿಗೆ ಚುನಾವಣಾಧಿಕಾರಿಗಳ ಉದಾಸೀನತೆ: ಆಕ್ರೋಶ ಚುನಾವಣಾ ವರದಿಗಾರಿಕೆಗೆ ತೆರಳಿದ್ದ ಸ್ಥಳೀಯ ಪತ್ರಕರ್ತರನ್ನು ಚುನಾವಣಾಧಿಕಾರಿಯೂ ಆದ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ರಾಜೇಂದ್ರ ಕುಮಾರ್ ಅವರು ನಿರ್ಲಕ್ಷಿಸಿದ ಘಟನೆ ನಡೆದಿದ್ದು, ಇದರಿಂದ ಪತ್ರಕರ್ತರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಕೆಲಕಾಲ ಸ್ಥಳದಲ್ಲಿ ವಾಗ್ವಾದವೂ ನಡೆಯಿತು. ಈ ವೇಳೆ ಚುನಾವಣಾಧಿಕಾರಿಯವರು ಘಟನೆಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳೇ (ಕಆಔ) ಕಾರಣ ಎಂದು ಹೇಳಿರುವುದಾಗಿ ಪತ್ರಕರ್ತರು ಆರೋಪಿಸಿದರು. ಗಣ್ಯರ ಉಪಸ್ಥಿತಿ ಚುನಾವಣಾ ಪ್ರಕ್ರಿಯೆಯಲ್ಲಿ ಸಹಾಯಕ ನಿರ್ದೇಶಕರಾದ ಕಹಿರುನಿಸ ಬೇಗಂ, ಅನ್ನಾವ್ರ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಲಕ್ಷ್ಮಿ, ಕಾರ್ಯದರ್ಶಿ ಅಯ್ಯಪ್ಪ, ಬಿಲ್ ಕಲೆಕ್ಟರ್ ವೆಂಕೋಬ ಸೇರಿದಂತೆ ಪಂಚಾಯತ್ ಸಿಬ್ಬಂದಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಬಸವರಾಜ್ ಪಂಪಾಪತಿ, ಕಾಂಗ್ರೆಸ್ ಮುಖಂಡರಾದ ಹೈದರ್ ಸಾಬ್ ಮುಲ್ಲಾ, ರಂಗಪ್ಪ ತೊಗರಿ, ರಾಜು ತವಗ, ದುರ್ಗಪ್ಪ ರಾಮ್ ಪಾಳಿ, ಹುಸೇನ್ ನಾಸಿ, ಹೈದರ್ಸಾಬ್ ಉದ್ದಾರ, ಸಾಬಣ್ಣ ಕಮಲದಿನ್ನಿ, ಹುಸೇನ್ ಬಾಷಾ ಆರ್ತಿ, ಗ್ರಾಮ ಪಂಚಾಯತ್ ಸದಸ್ಯರಾದ ಅಯ್ಯಪ್ಪ ತಾತ, ತಿಮ್ಮಣ್ಣ ನಾಯಕ್ ದೀವಾನ್, ಮಕತುಮಪರಾಶಿ, ಶಿವಮನ್ನಪ್ಪ ತ್ಯಾಪಲಿ, ಮಲ್ಲಪ್ಪ ಸೌದ್ರಿ, ಮಹಿಳಾ ಸದಸ್ಯರಾದ ಒಳ್ಳೆಮ್ಮ ಪೂಜಾರಿ, ದೊಡ್ಡ ಹುಲಿಗಮ್ಮ, ಶಾಹಿನಾಜ್ ಬೇಗಂ ಮೌಲಾಸಾಬ್, ಸಲ್ಮಾ ಬೇಗಮ್ ಹುಸೇನ್ ನಾಸಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಸಿಪಿಎಂ ಮುಖಂಡರಾದ ನರಸಣ್ಣ ನಾಯಕ್, ಶಬ್ಬೀರ್ ಜಾಲಹಳ್ಳಿ, ಮೌನೇಶ್, ಬಸವರಾಜ ಒಂದಲಿ, ರಿಯಾಜ್ ಆರ್ತಿ ಹಾಗೂ ಪಕ್ಷದ ಕಾರ್ಯಕರ್ತರು ಮತ್ತು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಅಹಿತಕರ ಘಟನೆಗಳು ನಡೆಯದಂತೆ ಡಿವೈಎಸ್ಪಿ ದತ್ತಾತ್ರೇಯ ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಈವೆಂಟ್ ಮ್ಯಾನೇಜ್‌ಮೆಂಟ್ (Event Management)

ಈವೆಂಟ್ ಮ್ಯಾನೇಜ್‌ಮೆಂಟ್ (Event Management) ಎಂಬುದು ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಯೋಜಿಸುವುದು, ಸಂಘಟಿಸುವುದು ಮತ್ತು ನಿರ್ವಹಿಸುವ ಕೌಶಲ್ಯಗಳನ್ನು ಕಲಿಸುವ ವೃತ್ತಿಪರ ಕೋರ್ಸ್ ಆಗಿದೆ. ಮದುವೆಗಳು, ಕಾರ್ಪೊರೇಟ್ ಕಾರ್ಯಕ್ರಮಗಳು, ಸಾಂಸ್ಕೃತಿಕ ಉತ್ಸವಗಳು, ಕ್ರೀಡಾಕೂಟಗಳು, ಸಂಗೀತ ಕಾರ್ಯಕ್ರಮಗಳು, ಪ್ರದರ್ಶನಗಳು ಹಾಗೂ ಸರ್ಕಾರಿ ಕಾರ್ಯಕ್ರಮಗಳ ನಿರ್ವಹಣೆಗೆ ಪರಿಣಿತರನ್ನು ಈ ಕ್ಷೇತ್ರದಲ್ಲಿ ತಯಾರಿಸಲಾಗುತ್ತದೆ.

ಕೋರ್ಸ್‌ನಲ್ಲಿ ಕಲಿಯುವ ಪ್ರಮುಖ ವಿಷಯಗಳು
ಈವೆಂಟ್ ಪ್ಲಾನಿಂಗ್ ಮತ್ತು ಸಂಘಟನೆ
ಈವೆಂಟ್ ಪ್ರೊಡಕ್ಷನ್ ಹಾಗೂ ಸ್ಟೇಜ್ ಮ್ಯಾನೇಜ್‌ಮೆಂಟ್
ಬಜೆಟ್ ತಯಾರಿಕೆ ಮತ್ತು ಹಣಕಾಸು ನಿರ್ವಹಣೆ
ವೆಂಡರ್ ಹಾಗೂ ಸಪ್ಲೈಯರ್ ಮ್ಯಾನೇಜ್‌ಮೆಂಟ್
ಮಾರ್ಕೆಟಿಂಗ್ ಮತ್ತು ಡಿಜಿಟಲ್ ಪ್ರಚಾರ
ಪಬ್ಲಿಕ್ ರಿಲೇಶನ್ಸ್ (PR) ಮತ್ತು ಮಾಧ್ಯಮ ನಿರ್ವಹಣೆ
ಲಾಜಿಸ್ಟಿಕ್ಸ್ ಮತ್ತು ಸಮಯ ನಿರ್ವಹಣೆ
ರಿಸ್ಕ್ ಮ್ಯಾನೇಜ್‌ಮೆಂಟ್ ಮತ್ತು ತುರ್ತು ಪರಿಸ್ಥಿತಿ ನಿರ್ವಹಣೆ
ಗ್ರಾಹಕರೊಂದಿಗೆ ಸಂವಹನ ಕೌಶಲ್ಯ
ತಂಡದ ನಾಯಕತ್ವ ಮತ್ತು ಸಮಸ್ಯೆ ಪರಿಹಾರ

ಅರ್ಹತೆ
ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸ್: 10ನೇ ಅಥವಾ 12ನೇ ತರಗತಿ ಉತ್ತೀರ್ಣ.
ಪದವಿ (BBA/BA in Event Management): ಯಾವುದೇ ವಿಭಾಗದಲ್ಲಿ 12ನೇ ತರಗತಿ (PUC) ಉತ್ತೀರ್ಣ.
ಸ್ನಾತಕೋತ್ತರ (MBA/PG Diploma): ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ.

ಕೋರ್ಸ್ ಅವಧಿ
ಸರ್ಟಿಫಿಕೇಟ್ ಕೋರ್ಸ್ 3 ರಿಂದ 6 ತಿಂಗಳು
ಡಿಪ್ಲೊಮಾ 1 ವರ್ಷ
ಪದವಿ (BBA/BA) 3 ವರ್ಷ
MBA/PG Diploma 2 ವರ್ಷ ಅಥವಾ 1 ವರ್ಷ (ಸಂಸ್ಥೆಯನ್ನು ಅವಲಂಬಿಸಿ)

ಅಗತ್ಯ ಕೌಶಲ್ಯಗಳು
ಉತ್ತಮ ಸಂವಹನ ಕೌಶಲ್ಯ
ಸೃಜನಶೀಲತೆ ಮತ್ತು ಹೊಸ ಆಲೋಚನೆಗಳು
ನಾಯಕತ್ವ ಗುಣ
ಸಮಯ ನಿರ್ವಹಣೆ
ಒತ್ತಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ
ತಂಡದೊಂದಿಗೆ ಸಮನ್ವಯ

ಉದ್ಯೋಗಾವಕಾಶಗಳು
ಕೋರ್ಸ್ ಪೂರ್ಣಗೊಳಿಸಿದ ನಂತರ ಈ ಕೆಳಗಿನ ಹುದ್ದೆಗಳಲ್ಲಿ ಕೆಲಸ ಮಾಡಬಹುದು:
ಈವೆಂಟ್ ಮ್ಯಾನೇಜರ್
ವೆಡ್ಡಿಂಗ್ ಪ್ಲಾನರ್
ಕಾರ್ಪೊರೇಟ್ ಈವೆಂಟ್ ಕೋ-ಆರ್ಡಿನೇಟರ್
ಪಬ್ಲಿಕ್ ರಿಲೇಶನ್ಸ್ (PR) ಆಫೀಸರ್
ಎಕ್ಸಿಬಿಷನ್ ಮತ್ತು ಟ್ರೇಡ್ ಫೇರ್ ಮ್ಯಾನೇಜರ್
ಬ್ರ್ಯಾಂಡ್ ಪ್ರೊಮೋಷನ್ ಎಕ್ಸಿಕ್ಯೂಟಿವ್
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
ಈವೆಂಟ್ ಪ್ರೊಡಕ್ಷನ್ ಮ್ಯಾನೇಜರ್
ಫ್ರೀಲಾನ್ಸ್ ಈವೆಂಟ್ ಕನ್ಸಲ್ಟೆಂಟ್
ಈವೆಂಟ್ ಕಂಪನಿ ಉದ್ಯಮಿ

ಉದ್ಯೋಗ ಕ್ಷೇತ್ರಗಳು
ಈವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಗಳು
ವೆಡ್ಡಿಂಗ್ ಪ್ಲಾನಿಂಗ್ ಸಂಸ್ಥೆಗಳು
ಕಾರ್ಪೊರೇಟ್ ಕಂಪನಿಗಳು
ಹೋಟೆಲ್ ಮತ್ತು ರೆಸಾರ್ಟ್‌ಗಳು
ಮಾಧ್ಯಮ ಮತ್ತು ಮನರಂಜನಾ ಸಂಸ್ಥೆಗಳು
ಜಾಹೀರಾತು ಮತ್ತು ಮಾರ್ಕೆಟಿಂಗ್ ಏಜೆನ್ಸಿಗಳು
ಪ್ರವಾಸೋದ್ಯಮ ಸಂಸ್ಥೆಗಳು
ಸರ್ಕಾರಿ ಮತ್ತು ಖಾಸಗಿ ಕಾರ್ಯಕ್ರಮಗಳ ಆಯೋಜನಾ ಸಂಸ್ಥೆಗಳು ವೇತನ ಆರಂಭಿಕ ಹಂತ: 2.5 ಲಕ್ಷದಿಂದ ?5 ಲಕ್ಷ ವಾರ್ಷಿಕ ಅನುಭವದ ನಂತರ: 6 ಲಕ್ಷದಿಂದ ?12 ಲಕ್ಷ ಅಥವಾ ಅದಕ್ಕಿಂತ ಹೆಚ್ಚು ಯಶಸ್ವಿ ಫ್ರೀಲಾನ್ಸ್ ವೆಡ್ಡಿಂಗ್ ಪ್ಲಾನರ್ ಅಥವಾ ಈವೆಂಟ್ ಕನ್ಸಲ್ಟೆಂಟ್‌ಗಳು ದೊಡ್ಡ ಕಾರ್ಯಕ್ರಮಗಳಿಂದ ಹೆಚ್ಚಿನ ಆದಾಯ ಗಳಿಸಬಹುದು.

ಉನ್ನತ ಶಿಕ್ಷಣದ ಅವಕಾಶಗಳು
MBA in Event Management
MBA in Marketing
PG Diploma in Public Relations
Digital Marketing
Hospitality & Tourism Management

ಕೋರ್ಸ್‌ನ ಪ್ರಯೋಜನಗಳು
ಸೃಜನಾತ್ಮಕ ಮತ್ತು ಚೈತನ್ಯಭರಿತ ವೃತ್ತಿ
ದೇಶ-ವಿದೇಶಗಳಲ್ಲಿ ಉದ್ಯೋಗಾವಕಾಶ
ಸ್ವಂತ ಈವೆಂಟ್ ಕಂಪನಿ ಆರಂಭಿಸುವ ಅವಕಾಶ
ಉತ್ತಮ ಸಂಬಳ ಮತ್ತು ವೃತ್ತಿ ಬೆಳವಣಿಗೆ
ವಿವಿಧ ಕ್ಷೇತ್ರಗಳ ಜನರೊಂದಿಗೆ ಕೆಲಸ ಮಾಡುವ ಅನುಭವದಿಂದ ಕಲಿಯಬಹುದು.

# ಕಂಪ್ಲಿ ತಾಲ್ಲೂಕಿನ 10 ಗ್ರಾಮಪಂಚಾಯತಿಗಳ 212 ಸ್ಥಾನಗಳಿಗೆ ಮೀಸಲಾತಿ ನಿಗದಿ : ಇನ್ನು ಗ್ರಾಮೀಣ ಪ್ರದೇಶಗಳಲ್ಲಿ ಆರಂಭವಾಗಲಿದೆ. ರಾಜಕೀಯ ಲೆಕ್ಕಾಚಾರ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ತಾಲ್ಲೂಕಿನ 10 ಗ್ರಾಮ ಪಂಚಾಯಿತಿಗಳ ವಾರ್ಡುಗಳ ವ್ಯಾಪ್ತಿ, ಸದಸ್ಯರ ಸ್ಥಾನಗಳ ಸಂಖ್ಯೆ, ಮೀಸಲಾತಿ ನಿಗದಿಪಡಿಸಿ ಜಿಲ್ಲಾ ಚುನಾವಣಾಧಿಕಾರಿಗಳು ಅಧಿಸೂಚನೆ ಹೊರಡಿಸಿದ್ದಾರೆ. ತಾಲ್ಲೂಕಿನ 10 ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ 212 ಸ್ಥಾನಗಳಿದ್ದು, ಪರಿಶಿಷ್ಟ ಜಾತಿ 25, ಪರಿಶಿಷ್ಟ ಮಹಿಳೆ 32, ಪರಿಶಿಷ್ಟ ಪಂಗಡ 10, ಪರಿಶಿಷ್ಟ ಪಂಗಡ ಮಹಿಳೆ 16, ಹಿಂದುಳಿದ ವರ್ಗ 5, ಹಿಂದುಳಿದ ವರ್ಗ ಮಹಿಳೆ 12, ಹಿಂದುಳಿದ ವರ್ಗ ಬಿ 4, ಹಿಂದುಳಿದ ವರ್ಗ ಬಿ ಮಹಿಳೆ 1, ಸಾಮಾನ್ಯ 60, ಸಾಮಾನ್ಯ ಮಹಿಳೆಯರಿಗೆ 47 ಸ್ಥಾನಗಳನ್ನು ನಿಗದಿಪಡಿಸಲಾಗಿದೆ.

ಇದರಲ್ಲಿಎಮ್ಮಿಗನೂರು ಗ್ರಾ.ಪಂ.ನ 35 ಸ್ಥಾನಗಳ ಪೈಕಿ ಎಸ್ಸಿ 4, ಎಸ್ಸಿ ಮಹಿಳೆ 4, ಎಸ್ಟಿ ಮಹಿಳೆ 1, ಬಿಸಿಎ 3, ಬಿಸಿಎ ಮಹಿಳೆ 3, ಬಿಸಿಬಿ 1, ಬಿಸಿಬಿ ಮಹಿಳೆ 1, ಸಾಮಾನ್ಯ




9, ಸಾಮಾನ್ಯ ಮಹಿಳೆಗೆ 9 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ನೆಲ್ಲುಡಿ ಗ್ರಾ.ಪಂ. 20 ಸ್ಥಾನಗಳ ಪೈಕಿ ಎಸ್ಸಿ 3, ಎಸ್ಸಿ ಮಹಿಳೆ 4, ಎಸ್ಟಿ 1 ಎಸ್ಟಿ ಮಹಿಳೆ 1, ಬಿಸಿಎ ಮಹಿಳೆ 1,ಸಾಮಾನ್ಯ 6, ಸಾಮಾನ್ಯ ಮಹಿಳೆ 4 ಸ್ಥಾನನಿಗದಿಪಡಿಸಲಾಗಿದೆ. ಸಣಾಪುರ ಗ್ರಾ.ಪಂನ 22 ಸ್ಥಾನಗಳ ಪೈಕಿ ಎಸ್ಸಿ 3, ಎಸ್ಸಿ ಮಹಿಳೆ 4,,ಎಸ್ಟಿ 1, ಎಸ್ಟಿ ಮಹಿಳೆ 1,ಬಿಸಿಎ 1, ಬಿಸಿಎ ಮಹಿಳೆ 1, ಸಾಮಾನ್ಯ 6, ಸಾಮಾನ್ಯ ಮಹಿಳೆ 5 ಸ್ಥಾನಗಳನ್ನು ನಿಗದಿಪಡಿಸಲಾಗಿದೆ.

ನಂ.10 ಮುದ್ದಾಪುರ ಗ್ರಾ.ಪಂ.ನ 24 ಸ್ಥಾನಗಳ ಪೈಕಿ ಎಸ್ಸಿ 3 , ಎಸ್ಸಿ ಮಹಿಳೆ 3, ಎಸ್ಟಿ 1, ಎಸ್ಟಿ ಮಹಿಳೆ 2,ಬಿಸಿಎ 1, ಬಿಸಿಎ ಮಹಿಳೆ 2, ಬಿಸಿಬಿ 1, ಸಾಮಾನ್ಯ 7, ಸಮಾನ್ಯ ಮಹಿಳೆ 5 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ರಾಮಸಾಗರ ಗ್ರಾ.ಪಂ.ನ 17 ಸ್ಥಾನಗಳ ಪೈಕಿ ಎಸ್ಸಿ 2, ಎಸ್ಸಿ ಮಹಿಳೆ 3, ಎಸ್ಟಿ ಮಹಿಳೆ 1, ಬಿಸಿಎ 1, ಬಿಸಿಎ ಮಹಿಳೆ 1, ಸಾಮಾನ್ಯ 5, ಸಾಮಾನ್ಯ ಮಹಿಳಿಯರಿಗೆ 4 ಸ್ಥಾನಗಳನ್ನು ನಿಗಸಿಪಡಿಸಲಾಗಿದೆ. ದೇವಸಮುದ್ರ ಗ್ರಾ.ಪಂ.ನ 19 ಸ್ಥಾನಗಳ ಪೈಕಿ ಎಸ್ಸಿ 1, ಎಸ್ಸಿ ಮಹಿಳೆ 2, ಎಸ್ಟಿ 1, ಎಸ್ಟಿ ಮಹಿಳೆ 2, ಬಿಸಿಎ ಮಹಿಳೆ 2, ಬಿಸಿಬಿ 1, ಸಾಮಾನ್ಯ 6, ಸಾಮಾನ್ಯ ಮಹಿಳೆಯರಿಗೆ 4 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಮೆಟ್ರಿ ಗ್ರಾ.ಪಂ.ನ 20 ಸ್ಥಾನಗಳ ಪೈಕಿ ಎಸ್ಸಿ 3, ಎಸ್ಸಿ ಮಹಿಳೆ 3, ಎಸ್ಟಿ 2, ಎಸ್ಟಿ ಮಹಿಳೆ 2, ಸಾಮಾನ್ಯ 5, ಸಾಮಾನ್ಯ ಮಹಿಳೆ 5 ಸ್ಥಾನಗಳನ್ನು ನಿಗದಿಪಡಿಸಲಾಗಿದೆ.

ದೇವಲಾಪುರ ಗ್ರಾ.ಪಂ.ನ 16

**ಕಂಪ್ಲಿ ತಾಲ್ಲೂಕಿನ 10 ಗ್ರಾಮ ಪಂಚಾಯತಿಗಳ ಕ್ಷೇತ್ರ ವ್ಯಾಪ್ತಿ, ಸ್ಥಾನಗಳು, ಮೀಸಲಾತಿಯನ್ನು ಪ್ರಕಟಿಸಲಾಗಿದೆ. ಈ ಬಗ್ಗೆ ಮಾಹಿತಿಯನ್ನು-ಆಯಾ ಗ್ರಾಮ ಪಂಚಾಯತಿಗಳ ಸೂಚನಾಫಲಕದಲ್ಲಿ ಪ್ರಕಟಿಸಲಾಗುವುದು. ಆರ್.ಕೆ.ಶ್ರೀಕುಮಾರ್. ತಾ.ಪಂ.ಇಒ.ಕಂಪ್ಲಿ.**

ಸ್ಥಾನಗಳ ಪೈಕಿ ಎಸ್ಸಿ 1, ಎಸ್ಸಿ ಮಹಿಳೆ 2, ಎಸ್ಟಿ 1, ಎಸ್ಟಿ ಮಹಿಳೆ 1, ಬಿಸಿಎ ಮಹಿಳೆ 2, ಬಿಸಿಬಿ 1, ಸಾಮಾನ್ಯ 5, ಸಾಮನ್ಯ ಮಹಿಳೆಯರಿಗೆ 3 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಹಂಪಾದೇವನಹಳ್ಳಿ ಗ್ರಾ.ಪಂ.ನ 20 ಸ್ಥಾನಗಳ ಪೈಕಿ ಎಸ್ಸಿ 3, ಎಸ್ಸಿ ಮಹಿಳೆ 4, ಎಸ್ಟಿ 1, ಎಸ್ಟಿ ಮಹಿಳೆ 2, ಸಾಮಾನ್ಯ 6, ಸಾಮಾನ್ಯ ಮಹಿಳೆಯರಿಗೆ 4 ಸ್ಥಾನಗಳನ್ನು ನಿಗದಿಪಡಿಸಲಾಗಿದೆ. ಸುಗ್ಗೇನಹಳ್ಳಿ ಗ್ರಾ.ಪಂ. 19 ಸ್ಥಾನಗಳ ಪೈಕಿ-ಎಸ್ಸಿ 2, ಎಸ್ಸಿಮಹಿಳೆ 3, ಎಸ್ಟಿ 2, ಎಸ್ಸಿಮಹಿಳೆ 3, ಸಾಮಾನ್ಯ 5, ಸಾಮಾನ್ಯ ಮಹಿಳೆಯರಿಗೆ 4 ಸ್ಥಾನಗಳನ್ನು ನಿಗದಿಪಡಿಸಲಾಗಿದೆ.

# ಸ್ವಾಮಿ ವಿವೇಕಾನಂದ ಇಂಗ್ಲಿಷ್ ಮತ್ತು ಹಿಂದಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನವೀನ್ ಬರಣ ಸಮಾರಂಭ ಅದ್ದೂರಿಯಾಗಿ ನೆರವೇರಿತು

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: R H no 4 ಸಿಂಧನೂರಿನ ಸ್ವಾಮಿ ವಿವೇಕಾನಂದ ಇಂಗ್ಲಿಷ್ ಮತ್ತು ಹಿಂದಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನ ಶೈಕ್ಷಣಿಕ ವರ್ಷಕ್ಕೆ ಸೇರ್ಪಡೆಯಾದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಬರಮಾಡಿಕೊಳ್ಳುವ ಉದ್ದೇಶದಿಂದ ನವೀನ್ ಬರಣ (ಹೊಸ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ) ವನ್ನು ಅತ್ಯಂತ ಸಂಭ್ರಮ ಹಾಗೂ ಭಕ್ತಿಭಾವದಿಂದ ಆಯೋಜಿಸಲಾಯಿತು.**

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಸನ್ ರೈಸ್ ಪ್ಯಾರಾಮೆಡಿಕಲ್ ಕಾಲೇಜು, ಸಿಂಧನೂರಿನ ಪ್ರಾಂಶುಪಾಲರಾದ ಡಿ. ಚಕ್ರವರ್ತಿ ಅವರು ಭಾಗವಹಿಸಿದರು. ವಿಶೇಷ ಅತಿಥಿಗಳಾಗಿ ಅನದುಲ್ ಸರ್ಕಾರ್, ಮಲಯ್ ಕರ್ಮಕರ್, ಪ್ರಮಾತ್ ಮಂಡಲ್ ಹಾಗೂ ಅಮರಯ್ಯ ಸ್ವಾಮಿ (ತಿಮ್ಮಾಪುರ) ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಮೆರುಗು ತಂದರು.

ಕಾರ್ಯಕ್ರಮದ ಆರಂಭದಲ್ಲಿ ಎಲ್ಲ ಗಣ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ ಹೋಮ ನೆರವೇರಿಸಿದರು. ಹೋಮವು ಪಾವಿತ್ರ್ಯ, ಶಾಂತಿ, ಸಮೃದ್ಧಿ ಮತ್ತು





ಶುಭಾರಂಭದ ಸಂಕೇತವಾಗಿದ್ದು, ನೂತನ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಯಶಸ್ವಿಯಾಗಲೆಂದು ಪ್ರಾರ್ಥಿಸಲಾಯಿತು. ಬಳಿಕ ಎಲ್ಲರಿಗೂ ಪ್ರಸಾದವನ್ನು ವಿತರಿಸಲಾಯಿತು.

ಈ ಶುಭ ಸಮಾರಂಭದಲ್ಲಿ ಶಾಲೆಯ ಅಧ್ಯಕ್ಷರಾದ ಶ್ರೀ ಪ್ರಹ್ಲಾದ್ ಮಜುಂದಾರ್, ಕಾರ್ಯದರ್ಶಿಯಾದ ಶ್ರೀ ಚೈತನ್ಯ ಧಕೈದಾರ್, ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀ ಪ್ರದೀಪ್ ದಾಸ್, ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸ್ವಪನ್ ಬೈದ್ಯ, ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಶಂಕರ್ ಮಂಡಲ್ ಉಪಸ್ಥಿತರಿದ್ದರು. ಅವರು ನೂತನ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ, ಶಾಲೆಯ ಪರವಾಗಿ ಸನ್ಮಾನಿಸಿ, ಅವರ ಶೈಕ್ಷಣಿಕ ಜೀವನ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು.

ಗಣ್ಯರು ತಮ್ಮ ಭಾಷಣದಲ್ಲಿ ಶಿಕ್ಷಣದ ಮಹತ್ವ, ಉತ್ತಮ ಸಂಸ್ಕಾರ, ಶಿಸ್ತು ಹಾಗೂ ನಿರಂತರ ಪರಿಶ್ರಮದ ಅಗತ್ಯವನ್ನು ವಿದ್ಯಾರ್ಥಿಗಳಿಗೆ ತಿಳಿಸಿ, ಜೀವನದಲ್ಲಿ ಉನ್ನತ ಗುರಿಗಳನ್ನು ಹೊಂದಿ ಸಾಧನೆ ಮಾಡುವಂತೆ ಪ್ರೇರೇಪಿಸಿದರು. ಶಿಕ್ಷಕರು ಹಾಗೂ ಪೋಷಕರ ಸಹಕಾರದೊಂದಿಗೆ ವಿದ್ಯಾರ್ಥಿಗಳು ಉತ್ತಮ ನಾಗರಿಕರಾಗಿ ಬೆಳೆಯಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಎಲ್ಲಾ ಶಿಕ್ಷಕ-ಶಿಕ್ಷಕಿಯರು, ಸಿಬ್ಬಂದಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದ್ದರು. ನೂತನ ವಿದ್ಯಾರ್ಥಿಗಳ ಮುಖದಲ್ಲಿ ಸಂತೋಷ, ಆತ್ಮವಿಶ್ವಾಸ ಮತ್ತು ಹೊಸ ಶಾಲಾ ಜೀವನದ ಉತ್ಸಾಹ ಸ್ಪಷ್ಟವಾಗಿ ಗೋಚರಿಸಿತು.

ಒಟ್ಟಾರೆಯಾಗಿ, ನವೀನ್ ಬರಣ ಸಮಾರಂಭವು ಹೊಸ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಶಾಲೆಯೊಂದಿಗೆ ಆತ್ಮೀಯ ಬಾಂಧವ್ಯ ಬೆಳೆಸುವ ಜೊತೆಗೆ ಶೈಕ್ಷಣಿಕ ಜೀವನದ ಹೊಸ ಅಧ್ಯಾಯಕ್ಕೆ ಶುಭಾರಂಭವಾಗುವಂತೆ ಯಶಸ್ವಿಯಾಗಿ ನೆರವೇರಿತು.

# ವಾಲ್ಮೀಕಿ ವೃತ್ತ-ಕರಡಿಗುಡ್ಡ ರಸ್ತೆ ಕಾಮಗಾರಿ ವಿಳಂಬಕ್ಕೆ ಸಾರ್ವಜನಿಕರ ಆಕ್ರೋಶ

❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ವಾಲ್ಮೀಕಿ ವೃತ್ತದಿಂದ ಕರಡಿಗುಡ್ಡ ರಸ್ತೆವರೆಗೆ ರಸ್ತೆ ನಿರ್ಮಾಣ ಕಾಮಗಾರಿ ವಿಳಂಬವಾಗಿರುವುದರಿಂದ ಸಾರ್ವಜನಿಕರು, ವ್ಯಾಪಾರಸ್ಥರು ಹಾಗೂ ಸ್ಥಳೀಯ ನಿವಾಸಿಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆರು ತಿಂಗಳ ಹಿಂದೆ ಅಂದಿನ ಸಚಿವ ಎನ್.ಎಸ್. ಬೋಸರಾಜು ಅವರು ರಸ್ತೆ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದ್ದರೂ ಇದುವರೆಗೆ ಕಾಮಗಾರಿ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.**

ಸ್ಥಳೀಯ ವ್ಯಾಪಾರಿ ಶಿವಾನಂದ್ ನಾಯಕ್ ಮಾತನಾಡಿ, ರಸ್ತೆ ತೋಡಿದ ಬಳಿಕ ಎರಡು ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಕಾಮಗಾರಿ ಮುಂದುವರಿಯದೆ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಿದರು. ಈ ರಸ್ತೆಯಲ್ಲಿ ಶಾಲೆ?ಕಾಲೇಜುಗಳು, ಕೋಚಿಂಗ್ ಸೆಂಟರ್, ರೈಸ್ ಮಿಲ್ ಸೇ-



ರಿದಂತೆ ಹೆಚ್ಚಿನ ಜನಸಂಚಾರವಿದ್ದು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ವ್ಯಾಪಾರಸ್ಥರಿಗೂ ವ್ಯವಹಾರ ನಡೆಸಲು ಸಮಸ್ಯೆಯಾಗುತ್ತಿದೆ. ಕಾಮಗಾರಿ ವಿಳಂಬದ ಬಗ್ಗೆ ಪ್ರಶ್ನಿಸಿದರೆ ವಿವಿಧ ಕಾರಣಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದ ಅವರು, ಮಾನ್ವಿ ಪಟ್ಟಣದ ಹೃದಯಭಾಗದಲ್ಲಿರುವ ಈ ರಸ್ತೆಯನ್ನು ಆದ-'ಷ್ಟು ಬೇಗ ಪೂರ್ಣಗೊಳಿಸಿ ಸಾರ್ವಜನಿಕರ ಸಂಚಾರಕ್ಕೆ ಅನುಕೂಲ ಕಲ್ಪಿಸುವಂತೆ ಅಧಿಕಾರಿಗಳು ಹಾಗೂ ಶಾಸಕರಿಗೆ ಮನವಿ ಮಾಡಿದರು.

ಸ್ಥಳೀಯ ನಿವಾಸಿ ಬಿ. ವೀರೇಶ್ ಆಚಾರಿ ನದಿಚಾಗಿ ಮಾತನಾಡಿ, ಶಂಕುಸ್ಥಾಪನೆಯ ವೇಳೆ ಶೀಘ್ರದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದು ಭರವಸೆ ನೀಡಲಾಗಿತ್ತು. ಆದರೆ ಇಂದಿಗೂ ರಸ್ತೆ ಕಾಮಗಾರಿ ಆರಂಭವಾಗದೆ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ರಸ್ತೆ ತೋಡಿರುವುದರಿಂದ ವಯೋವೃದ್ಧ ಮಹಿಳೆಯೊಬ್ಬರು ಬಿದ್ದು ಗಾಯಗೊಂಡ ಘಟನೆ ಕೂಡ ನಡೆದಿದೆ.

ಮಳೆ ಬಂದರೆ ರಸ್ತೆ ಸಂಪೂರ್ಣ ಕೆಸರುಮಯವಾಗಿ ಸಾರ್ವಜನಿಕರ ಸಂಚಾರ ಇನ್ನಷ್ಟು ದುಸ್ತರವಾಗುತ್ತದೆ. ಕಾಮಗಾರಿ ಗುತ್ತಿಗೆದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ರಸ್ತೆ ನಿರ್ಮಾಣವನ್ನು ಶೀಘ್ರ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶೇಖ್ ಮುಸ್ತಫಾ, ನೂರು ಮೊಹಮ್ಮದ್ ನಾಯ್ಕ, ಹನುಮಂತ ಕರಡಿಗುಡ್ಡ, ಸುದರ್ಶನ ಪೂಜಾರಿ, ಶಬ್ಬೀರ್ ಕಾರ್ಪೆಂಟರ್, ಶಾಲಂ ಮೆಕಾನಿಕ್ ಸೇರಿದಂತೆ ಸ್ಥಳೀಯ ವ್ಯಾಪಾರಿಗಳು, ನಿವಾಸಿಗಳು ಇದ್ದರು

# ಕಾರುಣ್ಯಾಶ್ರಮದಲ್ಲಿ ಹತ್ತು ಜನ ಸಾಧಕರಿಗೆ ಅಭಿಧಾನದ ಶುಭಾಶೀರ್ವಾದ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರೇವಾ ಇಂಡಿಯಾ ಮಾರ್ಕೆಟಿಂಗ್ ಸಂಸ್ಥೆಯ ರೈಜಿಂಗ್ ಸ್ಟಾರ್ಸ್ ಟೀಮ್ ಕೋರ್ ಕಮಿಟಿ ಹಾಗೂ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಮತ್ತು ಸ್ವಾಮಿ ಚಾರಿಟೇಬಲ್ ಟ್ರಸ್ಟ್ (ರಿ)ಕರಡಕಲ್ ಇವರುಗಳ ಸಹಯೋಗದೊಂದಿಗೆ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಸುಮಾರು ರೇವಾ ಇಂಡಿಯಾ ಮಾರ್ಕೆಟಿಂಗ್ ಸಂಸ್ಥೆಯಸ್ಟಾರ್ ಎಕ್ಸಿಕ್ಯೂಟಿವ್ ಮತ್ತು ಡಬಲ್ ಸ್ಟಾರ್ ಎಕ್ಸಿಕ್ಯೂಟಿವ್ ಹಾಗೂ ಫಾರಿನ್ ಟ್ರಿಪ್ ಅಚೀವರ್ಸ್ ಎಕ್ಸಿಕ್ಯೂಟಿವ್ ಮತ್ತು ಮೆಗಾಸ್ಟಾರ್ ಎಕ್ಸಿಕ್ಯೂಟಿವ್ ಆಗಿ ಸಾಧನೆ ಮಾಡಿದಂತಹ ಸುಮಾರು ಹತ್ತು ಜನ ಸಾಧಕರಿಗೆ "ಕರುನಾಡಿನ ಕಾರುಣ್ಯ ಸಾಧಕ ಕಣ್ಮಣಿಗಳು " ಎನ್ನುವ ಶ್ರೇಷ್ಠ ಬಿರುದಿನ ಅಭಿಧಾನವನ್ನಿತ್ತು ಗೌರವಿಸಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ ಹಾಗೂ ತಾವರಗೇರಾ ಪಟ್ಟಣದ ಶ್ರೀ ದಿ.ರುದ್ರಯ್ಯಸ್ವಾಮಿ ಹಿರೇಮಠದ ಪೀಠಾಧಿಪತಿಗಳಾದ ಶ್ರೀ ಮಹೇಶ್ವರ ಸ್ವಾಮಿಗಳಿಗೆ ರೇವಾ ಇಂಡಿಯಾ ಮಾರ್ಕೆಟಿಂಗ್ ಸಂಸ್ಥೆಯ ವತಿಯಿಂದ ಸನ್ಮಾನಿಸಿ



ಗೌರವಿಸಲಾಯಿತು. ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಲಾಯಿತು.ಈ ಕಾರ್ಯಕ್ರಮದಲ್ಲಿ ಮುಖ್ಯ ಸನ್ಮಾನಿತರಾಗಿ ಭಾಗವಹಿಸಿದ್ದ ಫಾರಿನ್ ಟ್ರಿಪ್ ಅಚೀವರ್ಸ್ ಎಕ್ಸಿಕ್ಯೂಟಿವ್ ಗಳಾದ ಜಿ. ಆರ್. ಪವಾರ್ ಮಾತನಾಡಿ ಇಂದಿನ ಈ ಸನ್ಮಾನ ಗೌರವ ನಮ್ಮ ಜೀವನದ ಇತಿಹಾಸ ಪುಟದಲ್ಲಿ ಸೇರಿದೆ. ರೇವಾ ಇಂಡಿಯಾ ಮಾರ್ಕೆಟಿಂಗ್ ಸಂಸ್ಥೆ ಕಾರುಣ್ಯಾಶ್ರಮದ ಜೊತೆ ಸದಾವಕಾಲವಿರುತ್ತದೆ. ಮನುಷ್ಯನಲ್ಲಿರುವ ಗರ್ವ ಸೊಕ್ಕು ಅಹಂಕಾರ ಅಳಿಯಬೇಕಾದರೆ ಒಮ್ಮೆ ಕಾರುಣ್ಯ ಕುಟುಂಬಕ್ಕೆ ಭೇಟಿ ನೀಡಬೇಕು. ಸ್ವಾರ್ಥದ ಈ ಜಗತ್ತಿನಲ್ಲಿ ನಿಸ್ವಾರ್ಥದ ಕರುಣೆಯ ಕುಟುಂಬವನ್ನು ಕಟ್ಟಿದ ಸಾಮಾನ್ಯ ಅರ್ಚಕ ಬಡಜಂಗಮ ವೇದಮೂರ್ತಿ ಅಮರಯ್ಯ ಸ್ವಾಮಿ ಸರ್ವ ಸಮಾಜದ ಸದ್ಗುರುಗಳಾಗಿ ನೊಂದವರ ನಾಡಿಮಿಡಿತವಾಗಿರುವುದು.

ಅವರ ಸಾರ್ಥಕ ಬದುಕಾಗಿದೆ. ಅವರ ಕನಸಿನ ಪ್ರತಿಯೊಂದು ಆಶಯವನ್ನು ಮಗನಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸಮಾಜದಲ್ಲಿನ ಟೀಕೆ ಟಿಪ್ಪಣಿ ಅವಮಾನ ಅಪಪ್ರಚಾರಗಳನ್ನು ಲೆಕ್ಕಿಸದೆ ಅಂತರಾತ್ಮ ಪರಮಾತ್ಮನನ್ನು ನಂಬಿ ಮಾಡುತ್ತಿರುವ ಈ ಕಾರ್ಯ ನಮ್ಮ ಸಂಸ್ಥೆಯ ಪ್ರೀತಿಗೆ ಪಾತ್ರವಾಗಿದೆ. ಮುಂದಿನ ದಿನಮಾನಗಳಲ್ಲಿ ನಮ್ಮ ಸಂಸ್ಥೆಯ ಅನೇಕ ಹಲವಾರು ಕಾರ್ಯಕ್ರಮಗಳನ್ನು ಕಾರುಣ್ಯ ಕುಟುಂಬದಲ್ಲಿ ನೆರವೇರಿಸುತ್ತೇವೆ. ಇಲ್ಲಿರುವ ಎಲ್ಲಾ



ಹಿರಿಯರು ಮತ್ತು ವಯಸ್ಕರ ಬುದ್ಧಿಮಾಂದ್ಯರು ದೇವರ ಸ್ವರೂಪಿಗಳು ಇಂತಹ ದೇವರಿಗೆ ಸುಂದರ ದೇವಾಲಯವನ್ನು ನಿರ್ಮಿಸಿ ಕೊಟ್ಟಿರುವ ಪ್ರತಿಯೊಬ್ಬ ಕಾರುಣ್ಯ ಮೂರ್ತಿಗಳಿಗೂ ಕೂಡ ನಮ್ಮ ಸಂಶಯ ವತಿಯಿಂದ ಹೃದಯ ಪೂರ್ವಕ ಹೃತ್ಪೂರ್ವಕ ಧನ್ಯವಾದಗಳು. ಇಂದಿನ ಸುಮಾರು 10 ಜನ ಸಾಧಕರು ಬದುಕಿನಲ್ಲಿ ಇಂತಹ ಸಾಧಕರ ಮಧ್ಯೆ ಸನ್ಮಾನಿತ ಗೊಳ್ಳುತ್ತಿರುವುದು ಪೂರ್ವಜನ್ಮದ ಪುಣ್ಯ ಎಂದು ಭಾವನಾತ್ಮಕವಾಗಿ ಮಾತನಾಡಿ ಆಶ್ರಮದ ಸೇವೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮದಲ್ಲಿ ಸ್ಟಾರ್ ಸ್ಟಾರ್ ಎಕ್ಸಿಕ್ಯೂಟಿವ್ ಗಳಾದ ಪಾರ್ವತಿ ಗಂಡ ಅಶೋಕ ಗೌಡ್ರು ದೇವದುರ್ಗ. ಅಂಬಿಕಾ ಗಂಡ ಮಲ್ಲಿಕಾರ್ಜುನ ದೇವದುರ್ಗ. ಮಂಜುನಾಥ ಸಿರವಾರ. ಡಾ.ಹೆಚ್ ಯಾದವ್ ಕಾಡಂಗೇರಿ ಯಾದಗಿರಿ. ಎಂ.ಡಿ.ಸೂಫಿ ದೇವದುರ್ಗ. ವೆಂಕೋಬ ಪವಾರ್ ದೇವದುರ್ಗ. ಹಾಗೂ ಡಬಲ್ ಸ್ಟಾರ್ ಎಕ್ಸಿಕ್ಯೂಟಿವ್ ಗಳಾದ ಡಾ.ಪ್ರಭು ವಿಶ್ವಕರ್ಮ ಕುರ್ಕಿಹಳ್ಳಿ ದೇವದುರ್ಗ. ಮತ್ತು ಫಾರಿನ್ ಟ್ರಿಪ್ ಅಚೀವರ್ಸ್ ಎಕ್ಸಿಕ್ಯೂಟಿವ್ ಗಳಾದ ಗೇಮಣ್ಣ ಪವಾರ್. ಮಂಜುಳಾ ಪವಾರ್. ಮತ್ತು ಮೆಗಾಸ್ಟಾರ್ ಎಕ್ಸಿಕ್ಯೂಟಿವ್ ಗಳಾದ ನಾಗಮ್ಮ ಗಂಡ ಚನ್ನಪ್ಪ ಯಾದವ್ ಸಿಂಧನೂರು ಇವರುಗಳನ್ನು "ಕರುನಾಡಿನ ಕಾರುಣ್ಯ ಸಾಧಕ ಕಣ್ಮಣಿಗಳು" ಎನ್ನುವ ಶ್ರೇಷ್ಠ ಬಿರುದಿನ ಅಭಿಧಾನವನ್ನು ಹರ ಗುರು ಚರಮೂರ್ತಿಗಳ ಗಣ್ಯಾತಿ ಗಣ್ಯರ ಸಮಕ್ಷಮದಲ್ಲಿ ವಿತರಿಸಿ ಸನ್ಮಾನಿಸಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಶ್ರೀ ಮಹೇಶ್ವರ ಸ್ವಾಮಿಗಳು ಶ್ರೀ ರುದ್ರಯ್ಯ ಸ್ವಾಮಿ ಹಿರೇಮಠ ತಾವರಗೇರಾ ಇವರು ದಿವ್ಯ ಸಾನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ನಾಗಮ್ಮ ಗಂಡ ಚನ್ನಪ್ಪ ಯಾದವ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಲಕ್ಷ್ಮಣ ನಾಯಕ ನಿವೃತ್ತ ಶಿಕ್ಷಕರು ದೇವದುರ್ಗ. ಬಸವರಾಜ ಬಡಿಗೇರ ಸುರಪುರ.ನಾಗಮ್ಮ ಕಾಡಂಗೇರಾ. ಸರಸ್ವತಿ. ಅನುಸೂಯ. ಶಿವು ಕಾಡಂಗೇರಾ ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವಸ್ವಾಮಿ ಹಿರೇಮಠ ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಶರಣು ಸ್ವಾಮಿ ಹಾಗೂ ರೇವಾ ಇಂಡಿಯಾ ಮಾರ್ಕೆಟಿಂಗ್ ನ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101